ದಿನ 1 : ಪವಿತ್ರಾತ್ಮನು ನಿಮ್ಮೊಂದಿಗೆ ವಾಸಿಸುತ್ತಾನೆ.

ಯೋಹಾನ 14:16-17

"ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು, ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲವೂ ನಿಮ್ಮೊಂದಿಗೆ ಇರುವುದಕ್ಕೆ ಕಳುಹಿಸಿ ಕೊಡುವನು. ಆ ಸಹಾಯಕನು ಯಾರೆಂದರೆ ಸತ್ಯದ ಆತ್ಮನೇ. ಲೋಕವು ಆತನನ್ನು ನೋಡದೆಯೂ, ತಿಳಿಯದೆಯೂ ಇರುವುದರಿಂದ ಆತನನ್ನು ಸ್ವೀಕರಿಸಲಾರದು. ನೀವು ಆತನನ್ನು ಬಲ್ಲಿರಿ, ಹೇಗೆಂದರೆ ಆತನು ನಿಮ್ಮೊಂದಿಗೆ ವಾಸಮಾಡುತ್ತಾನೆ ಮತ್ತು ನಿಮ್ಮೊಳಗೆ ಇರುವನು."

ಭಾವನಾತ್ಮಕ ತೊಂದರೆಗಳನ್ನು ಎದುರಿಸುತ್ತಿರುವ ಜನರಿಗೆ ಸಲಹೆ ನೀಡುವ ವೃತ್ತಿಪರ ಸಲಹೆಗಾರರು ಅವರ ಸಮಸ್ಯೆಗಳನ್ನು ಗುರುತಿಸಿ ಮತ್ತು ಅದನ್ನು ಪರಿಹರಿಸಲು ಅವರಿಗೆ ಸಹಾಯ ಮಾಡುವುದರಲ್ಲಿ ಬೆಂಬಲ ನೀಡುತ್ತಾರೆ. ತಮ್ಮ ಕಕ್ಷಿಧಾರರ ಯೋಗಕ್ಷೇಮಕ್ಕಾಗಿ ಅವರ  ಮತ್ತು ವೈಯಕ್ತಿಕ ಸಮಸ್ಯೆಗಳ ಮತ್ತು ಜೀವನ ಪರಿವರ್ತನೆಯ ಸಮಯದಲ್ಲಿ ಅವರನ್ನು ಬೆಂಬಲಿಸಿ ದೃಷ್ಟಿಯಿಂದ ಹೆಚ್ಚಿನ ಸಲಹೆಗಾರರು ಒಂದು ನಿರ್ದಿಷ್ಟ ಸಂಚಿಕೆಯಲ್ಲಿ ಕಕ್ಷಿಧಾರರೊಂದಿಗೆ ಹೆಚ್ಚು ಅವಧಿಗಲ್ಲದೆ ಬರೀ ಒಂದು ನಿಗದಿತ ಅವಧಿಯವರೆಗೆ ಕೆಲಸ ಮಾಡುತ್ತಾರೆ.

ಸಲಹೆಗಾರರಾಗಿ ನಮಗೆ ಪವಿತ್ರಾತ್ಮನನ್ನು ನೀಡಲಾಗಿದೆ. ಆದರೆ ನಿರ್ದಿಷ್ಟ ಸಮಯಕ್ಕಲ್ಲದೆ ಶಾಶ್ವತವಾಗಿ.  ಆತನು ನಿಮ್ಮೊಂದಿಗೆ ವಾಸಮಾಡುತ್ತಾನೆ ಮತ್ತು ನಿಮ್ಮೊಳಗೆ ಇರುವನು. ಲೋಕವು ಆತನನ್ನು ನೋಡದೆಯೂ, ತಿಳಿಯದೆಯೂ ಇರುವುದರಿಂದ ಆತನನ್ನು ಸ್ವೀಕರಿಸಲಾರದು.

ನಾವು ನಿಜವಾಗಿಯೂ ಗೌರವಿಸುವ ಯಾರೊಬ್ಬರು ನಮ್ಮ ಮನೆಯಲ್ಲಿ, ನಮ್ಮೊಂದಿಗೆ ಉಳಿದುಕೊಳ್ಳುತ್ತಿದ್ದಾರೆಂದು ಊಹಿಸಿಕೊಳ್ಳಿ. ಅವರನ್ನು ಬಹಳ ವಿಶೇಷ ಮತ್ತು ಆದರಣೆಯಿಂದ ನೋಡಿಕೊಳ್ಳುವಂತೆ ನಾವು ಖಚಿತಪಡಿಸಿಕೊಳ್ಳುತ್ತೇವೆ. ಅವರು ಸಮಯಕ್ಕೆ ಸರಿಯಾಗಿ ತಮ್ಮ ಆಹಾರವನ್ನು ಪಡೆಯುತ್ತಾರೆ ಮತ್ತು ಕೇವಲ ಸಾಮಾನ್ಯ ಆಹಾರವಲ್ಲ, ವಿಶೇಷ ಭಕ್ಷ್ಯಗಳು. ಎಲ್ಲ ವಿಷಯಗಳಲ್ಲಿ ಆ ವ್ಯಕ್ತಿಗೆ ನಾವು ಅತ್ಯುತ್ತಮವಾದದನ್ನು ನೀಡಲು ಬಯಸುತ್ತೇವೆ. ನಾವು ಪವಿತ್ರಾತ್ಮನನ್ನು ವಿಶೇಷವಾಗಿ ಭಾವಿಸುವಂತೆಯೂ ಮತ್ತು ನಮ್ಮೊಳಗೆ ಆದರಿಸಲ್ಪಟ್ಟಂತೆ ಮಾಡುತ್ತಿದ್ದೇವೆಯೇ?

ಒಬ್ಬ ಸಲಹೆಗಾರನಾಗಿ, ಆತನು ನಮ್ಮೊಂದಿಗೆ ಮಾತಾಡಲು ಇಚ್ಚಿಸುತ್ತಾರೆ. ಆತನ ಸಲಹೆಯನ್ನು ಕೇಳಲು ನಾವು ಸಮಯ ತೆಗೆದುಕೊಳ್ಳುತ್ತೇವೆಯೇ? ಕೊನೆಯ ಬಾರಿ ಯಾವಾಗ ನೀವು ಪವಿತ್ರಾತ್ಮನ ಸಲಹೆ ಅಥವಾ ಮಾರ್ಗದರ್ಶನವನ್ನು ಕೇಳಿಸಿಕೊಂಡು ಅದರಂತೆ ನಡೆದಿರಿ? ಆತನ ಅಮೂಲ್ಯವಾದ ಆಲೋಚನೆಯನ್ನು ಕೇಳಲು ಮತ್ತು ನಮ್ಮ ಇಚ್ಛೆಗೆ ವಿರುದ್ಧವಾಗಿ ಇದ್ದರು ಸಹ ಅದನ್ನು ಅನುಸರಿಸುವ ಅಭ್ಯಾಸ ಮಾಡಿಕೊಳ್ಳುತ್ತೇನೆ ಎಂಬ ಬದ್ಧತೆಯನ್ನು ಮಾಡಬಹುದೇ? ಆಗ ಮಾತ್ರ ನಾವು ಆತ್ಮನಿಂದ ಮುನ್ನಡೆಸಲ್ಪಟ್ಟವರಾಗಿದ್ದೇವೆ ಎಂದು  ನಾವು ಭರವಸೆಯಿಂದ ಹೇಳಬಹುದು.

ಅನ್ವಯ

ತನ್ನ ಸಲಹೆಯನ್ನು ನೀಡವಂತೆ ಮತ್ತು ಆತನು ನೀಡುವ ಮಾರ್ಗದರ್ಶನವನ್ನು ಗಮನವಿಟ್ಟು ಕೇಳಿಸಿಕೊಂಡು ಅದರಂತೆ ನಡೆಯಿರಿ, ಆತನನ್ನು ಮನವಿ ಮಾಡಿಕೊಳ್ಳುತ್ತಾ ಪವಿತ್ರಾತ್ಮನ ಜೊತೆಗೆ ಮರೆಯಲಾಗದ ಸಮಯವನ್ನು ಕಳೆಯಿರಿ.

ಅನುವಾದ : ಕ್ಲೆವಿನ್ ಪೌಲ್

ದಿನ 2 : ಪವಿತ್ರಾತ್ಮನು ನಿಮಗೆ ಎಲ್ಲಾ ವಿಷಯಗಳನ್ನು ಬೋಧಿಸುವನು.

ಯೋಹಾನ 14:26-27

26 ಆದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಸಹಾಯಕ,ಅಂದರೆ ಆ ಒಬ್ಬನಾದ ಪವಿತ್ರಾತ್ಮ ನಿಮಗೆ ಎಲ್ಲ ವಿಷಯಗಳನ್ನು ಬೋಧಿಸುವನು ಮತ್ತು ನಾನು ನಿಮಗೆ ಹೇಳಿದ ಎಲ್ಲ ವಿಷಯಗಳನ್ನು ನಿಮ್ಮ ಮನಸ್ಸಿಗೆ ತರುವನು.
27 ನಾನು ನಿಮಗೆ ಶಾಂತಿಯನ್ನು ಬಿಟ್ಟುಹೋಗುತ್ತೇನೆ; ನನ್ನ ಶಾಂತಿಯನ್ನು ನಿಮಗೆ ಕೊಡುತ್ತೇನೆ. ಲೋಕವು ನಿಮಗೆ ಕೊಡುವಂಥ ರೀತಿಯಲ್ಲಿ ನಾನು ಅದನ್ನು ಕೊಡುವುದಿಲ್ಲ. ನಿಮ್ಮ ಹೃದಯಗಳು ಕಳವಳಗೊಳ್ಳುವಂತೆ ಅಥವಾ ಭಯದಿಂದ ಕುಗ್ಗಿಹೋಗುವಂತೆ ಬಿಡಬೇಡಿರಿ.

ನಮ್ಮ ಶಾಲೆ ಅಥವಾ ಕಾಲೇಜು ಜೀವನದ ಸಮಯದಲ್ಲಿ; ನಮಗೆ ಕೆಲವು ತರಗತಿಗೆ ಹಾಜರಾಗಲು ಇಷ್ಟವಾಗುತಿರಲಿಲ್ಲ. ಕಾರಣ ನಮಗೆ ಆ ವಿಷಯ ಇಷ್ಟವಾಗದೆ ಇರಬಹುದು, ಅಥವಾ ಆ ಶಿಕ್ಷಕನನ್ನು ಇಷ್ಟಪಡದೆ ಇರಬಹುದು. ಅಥವಾ ನಾವು ಪಾಠಕ್ಕಿಂತ ಹೊರಗಿರುವ ಚಲನಚಿತ್ರ ಅಥವಾ ಕೆಲವು ಕ್ರೀಡೆಗಳು ಹೆಚ್ಚು ಇಷ್ಟಪಡುತ್ತಿರಬಹುದು.

ಪವಿತ್ರಾತ್ಮನು ಅತ್ಯುತ್ತಮ ಶಿಕ್ಷಕ. ಪವಿತ್ರಾತ್ಮನಿಗಿಂತ ಉತ್ತಮವಾಗಿ ಯಾರೂ ಕಲಿಸಲು ಸಾಧ್ಯವಿಲ್ಲ. ಆತನು ಕಲಿಸುವ ವಿಷಯವೂ ಸಹ ಅತ್ಯುತ್ತಮ ವಿಷಯವಾಗಿದೆ. ಆದರೆ ನಾವು ಆ ವಿಷಯದ ಬಗ್ಗೆ ಕಲಿಯಲು ಬಿಡುವಿಲ್ಲದಿರಬಹುದು. ನಮಗೆ ಪವಿತ್ರಾತ್ಮ ಕಲಿಸುವ ವಿಷಯದಲ್ಲಿ ಇಷ್ಟವಿಲ್ಲದಿರಬಹುದು. ನಾವು ಪವಿತ್ರಾತ್ಮ ನೀಡಲು ಬಯಸಿದಕ್ಕಿಂತ ಹೆಚ್ಚಾಗಿ ಬೇರೆಯದನ್ನು ಇಷ್ಟಪಡುತ್ತೇವೆ.

ನೀಡುವ ಈ ವಿಷಯವು ಶಾಂತಿಯನ್ನು ನೀಡುತ್ತದೆ. ಇದು ಎಲ್ಲಾ ತೊಂದರೆಗಳಿಂದ ಮತ್ತು ಭಯದಿಂದ ನಮ್ಮನ್ನು ಬಿಡುಗಡೆ ಮಾಡುತ್ತದೆ. ಒಂದು ದಿನ ನಾವು ಈ ವಿಷಯವನ್ನು ಇಷ್ಟಪಡಲೇಬೇಕಾಗಿದೆ, ಇಂದೇ ಯಾಕೆ ಇಷ್ಟ ಪಡಬಾರದು?

ಅನ್ವಯ

ಧರ್ಮಗ್ರಂಥಗಳಿಂದ, ಪವಿತ್ರಾತ್ಮನಿಗೆ ಕಿವಿಕೊಡುವ ಸ್ಮರಣೀಯ ಸಮಯವನ್ನು ನೀವು ಹೊಂದಿರಿ. ದೇವರ ಚಿತ್ತವನ್ನು ನೀವು ಅರ್ಥಮಾಡಿಕೊಳ್ಳಲು ಮತ್ತು ಅನುಸರಿಸುವಂತೆ ಕಲಿಸಲು ಆತನನ್ನು ಕೇಳಿಕೊಳ್ಳಿರಿ.

ಅನುವಾದ : ಕ್ಲೆವಿನ್ ಪೌಲ್

ದಿನ 3 : ಪವಿತ್ರಾತ್ಮನು ಯೇಸುವಿನ ಕುರಿತು ಸಾಕ್ಷಿಹೇಳುವನು.

ಯೋಹಾನ 15:26-27

26 ನಾನು ತಂದೆಯಿಂದ ನಿಮಗೆ ಕಳುಹಿಸುವ ಸಹಾಯಕ,ಅಂದರೆ ತಂದೆಯಿಂದ ಹೊರಡುವ ಸತ್ಯದ ಪವಿತ್ರಾತ್ಮ ಬಂದಾಗ ಅವನು ನನ್ನ ಕುರಿತು ಸಾಕ್ಷಿ ಹೇಳುವನು;
27 ನೀವು ಆರಂಭದಿಂದಲೂ ನನ್ನ ಸಂಗಡ ಇದ್ದುದರಿಂದ ನೀವೂ ಸಾಕ್ಷಿನೀಡಬೇಕು.

ಸಾಕ್ಷಿ ಪದದ ಅರ್ಥ ಯಾವುದಾದರೂ ವಿಷಯದ ಬಗ್ಗೆ ಗಂಭೀರವಾಗಿ ಮಾತನಾಡುವುದು, (ವಿಶೇಷವಾಗಿ ಕಾನೂನು ನ್ಯಾಯಾಲಯದಲ್ಲಿ,) ಅಥವಾ ಆದಾರ ನೀಡವುದು/ಒದಗಿಸುವುದು. ನಾವು ಆತ್ಮನಿಂದ ನಡೆಸಲ್ಪಟ್ಟವರಾಗಿದ್ದರೆ, ನಾವು ಸಹ ಯೇಸುವಿನ ಬಗ್ಗೆ ಸಾಕ್ಷಿ ನೀಡುವೆವು.

ಯೇಸು ತನ್ನ ಶಿಷ್ಯರಿಗೆ, ಅವರು ಮೊದಲಿನಿಂದಲೂ ಆತನೊಂದಿಗೆ ಇದ್ದ ಕಾರಣ ಅವರು ಸಾಕ್ಷಿ ನೀಡಬೇಕೆಂದು ಹೇಳಿದನು. ಹಾಗಾಗಿ, ಪವಿತ್ರಾತ್ಮನು ಎಷ್ಟು ಹೆಚ್ಚು ಸಮಯ ನಮ್ಮೊಂದಿಗೆ ಇದ್ದಾನೆ, ನಾವು ಯೇಸುವಿನ ಬಗ್ಗೆ ಸಾಕ್ಷಿ ನೀಡುವಲ್ಲಿ ಅಷ್ಟೇ ಹೆಚ್ಚಾಗಿ ಗಂಭೀರವಾಗಿರಬೇಕು.

ನಾವು ನಮ್ಮ ಸುತ್ತಮುತ್ತ ನೋಡಬಹುದು, ಹೆಚ್ಚಿನ ಜನರು ಇತರರ ಬಗ್ಗೆ, ವ್ಯವಸ್ಥೆ, ಅಭ್ಯಾಸಗಳ ಬಗ್ಗೆ ಸಾಕ್ಷಿ ಕೊಡುತ್ತಾರೆ, ಆದರೆ ಬಹಳ ಕಡಿಮೆ ಜನರು ಯೇಸುವಿನ ಬಗ್ಗೆ ಸಾಕ್ಷಿ ನೀಡುತ್ತಿದ್ದಾರೆ.

ನಾವು ಯಾವ ವಿಷಯದ ಬಗ್ಗೆ ಗಂಭೀರವಾಗಿ ಮಾತನಾಡಬೇಕು! ಯೇಸುವಿನ ಬಗ್ಗೆ ಅಥವಾ ಇತರ ವಿಷಯಗಳ ಬಗ್ಗೆಯೇ, ಆಯ್ಕೆ ನಮ್ಮದು.

<u>ಅನ್ವಯ</u>

ಇಂದು ಒಬ್ಬರಿಗೆ ಯೇಸುವಿನ ಬಗ್ಗೆ ಸಾಕ್ಷಿ ಹೇಳಲು ಸಮಯ ತೆಗೆದುಕೊಳ್ಳಿ. ಪ್ರತಿದಿನವೂ ಆತನಿಗೆ ಸಾಕ್ಷಿಯಾಗಲು ಅಭ್ಯಾಸ ಮಾಡಿ. ಕನಿಷ್ಠ ಒಬ್ಬ ವ್ಯಕ್ತಿಯಿಂದ ಆರಂಭಗೊಂಡು ಅದನ್ನು ಹೆಚ್ಚಿಸಿರಿ.

ಅನುವಾದ : ಕ್ಲೆವಿನ್ ಪೌಲ್

---

ದಿನ 4 : **ಪವಿತ್ರಾತ್ಮರು ಯೇಸುವಿಗೆ ಮಹಿಮೆಯನ್ನು ತರುತ್ತಾರೆ**

**<u>ಯೋಹಾನ 16: 13–14</u>**

13 **ಆದರೆ ಆತನು ಅಂದರೆ ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ಎಲ್ಲಾ ಸತ್ಯಕ್ಕೆ ನಡಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತನಾಡದೆ ತಾನು ಕೇಳಿದವುಗಳನ್ನೇ ಮಾತನಾಡುತ್ತಾನೆ; ಮುಂದೆ ಬರುವದಕ್ಕಿರುವ ವಿಷಯಗಳನ್ನು ಆತನು ನಿಮಗೆ ತೋರಿಸುವನು.**
14 **ಆತನು ನನ್ನನ್ನು ಮಹಿಮೆಪಡಿಸುವನು; ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಯಪಡಿಸುವನು.**

ನಾವು ಈ ಪ್ರಪಂಚವನ್ನು ನೋಡಿದಾಗ ಎಲ್ಲಾ ಮಹಿಮೆಯನ್ನು ಜನರೇ ಪುನಃ ಪುನಃ ತೆಗೆದುಕೊಳ್ಳುತ್ತಾರೆ. ಅವರವರ ಬಗ್ಗೆ ಅವರೇ ದೊಡ್ಡದಾಗಿ ಮಾತನಾಡುತ್ತಾರೆ. ಮತ್ತು ಉನ್ನತ ಸ್ಥಾನದಲ್ಲಿರುವವರು ಅಧಿಕವಾಗಿ ಪ್ರಶಂಸೆ/ಮಹಿಮೆ ಪಡಿಸಿಕೊಳ್ಳಲ್ಪಡುತ್ತಾರೆ.

ನಾವು ಒಂದು ವೇಳೆ ಪವಿತ್ರಾತ್ಮರ ಮೂಲಕ ನಡೆಸಲ್ಪಡುವವರಾದರೆ ಪವಿತ್ರಾತ್ಮರು ನಮ್ಮನ್ನು ಸರ್ವಸತ್ಯದ ಕಡೆಗೆ ನಡೆಸುತ್ತಾರೆ. ರಕ್ಷಣೆಯು ಯಹೋವನಿಂದ ಬರುತ್ತದೆ., "ಹಲ್ಲೆಲೂಯ!" ರಕ್ಷಣೆ, ಮಹಿಮೆ ಶಕ್ತಿ ಎಲ್ಲವು ನಮ್ಮ ಕರ್ತರಿಗೆ ಮಾತ್ರ ಸೇರುತ್ತದೆ ಎಂಬ ಧ್ವನಿಯನ್ನು ಪರಲೋಕದಲ್ಲಿ ಕೇಳುವೆವು.

ಆತ್ಮನು ತನ್ನಷ್ಟಕ್ಕೆ ತಾನೇ ಮಾತನಾಡದೆ ತಾನು ಕೇಳಿದವುಗಳನ್ನೇ ಮಾತನಾಡುತ್ತಾನೆ; ಮುಂದೆ ಬರಲಿರುವ ವಿಷಯಗಳನ್ನು ಆತನು ನಿಮಗೆ ತಿಳಿಸುವನು.

ಒಂದು ವೇಳೆ ನಾವು ಪವಿತ್ರಾತ್ಮದಿಂದ ನಡೆಸಲ್ಪಡುವುದಾದರೆ ಪವಿತ್ರಾತ್ಮರು ಯೇಸುವಿನ ಬಳಿಯಿಂದ ತೆಗೆದುಕೊಂಡು ನಮಗೆ ತಿಳಿಯಪಡಿಸುತ್ತಾರೆ. ಪ್ರಶ್ನೆ ಏನೆಂದರೆ ನಾವು ದೇವರ ಜ್ಞಾನದಲ್ಲಿ ಬೆಳೆಯುತ್ತಿದ್ದಿವಾ?

**ಅನ್ವಯ**

ಯಾವ ಕೆಲವು ವಿದಗಳಲ್ಲಿ ಪವಿತ್ರಾತ್ಮರು ನಿಮಗೆ ಯೇಸುವಿನ ಬಗ್ಗೆ ಅರ್ಥಮಾಡಿಸಿದರು. ಮತ್ತು ಅಸಂಬಂಧದಿಂದ ನೀವು ಯೇಸುವನ್ನು ಪ್ರಶಂಸೆಪಡಿಸುವುದರಲ್ಲಿ ಬೆಳೆದಿದ್ದೀರಾ ಮತ್ತು ಹಿಂದಿನಕ್ಕಿಂತ ಈಗ ನೀವು ಯೇಸುವಿಗೆ ಹೆಚ್ಚಿಗೆ ಮಹಿಮೆ, ಗೌರವ ಮರಿಯಾದೆಯನ್ನು ಸಲ್ಲಿಸುವುದಕ್ಕೆ ಸಹಯವಾಗಿದೆ ?

ಅನುವಾದ: ಜ್ಯೋತಿನಾಗರಾಜ್

---

ದಿನ 5 : **ಪವಿತ್ರಾತ್ಮರು ನಮಗೆ ಧೈರ್ಯವಾಗಿ ಮಾತನಾಡಲು ಸಾಮರ್ಥ್ಯವನ್ನು ನೀಡುತ್ತಾರೆ**

**ಅಪೋಸ್ತಿಲರು ಕೃತ್ಯಗಳು : 4:31–32**

31 **ಹೀಗೆ ಪ್ರಾರ್ಥಿಸಿದ ಮೇಲೆ ಅವರು ಕೂಡಿದ್ದ ಸ್ಥಳವು ನಡುಗಿತು. ಅವರೆಲ್ಲರೂ ಪವಿತ್ರಾತ್ಮಭರಿತರಾಗಿ ದೇವರ ವಾಕ್ಯವನ್ನು ಧೈರ್ಯದಿಂದ ಮಾತನಾಡಿದರು.** 32 **ನಂಬಿದ್ದ ಸಮೂಹದವರ ಹೃದಯವೂ ಪ್ರಾಣವೂ ಒಂದೇ ಆಗಿತ್ತು; ಇದಲ್ಲದೆ ಅವರಲ್ಲಿ ಯಾವನೂ ತನ್ನಗಿದ್ದ ಯಾವದೊಂದನ್ನೂ ತನ್ನ ಸ್ವಂತ ದ್ದೆಂದು ಹೇಳಲಿಲ್ಲ; ಆದರೆ ಎಲ್ಲವೂ ಅವರಿಗೆ ಹುದು ವಾಗಿತ್ತು.**

ಅಪೋಸ್ತಿಲರು ಇದ್ದ ದಿನಗಳ ಕಡೆಗೆ ನಾವು ಹೋಗಿ ನೋಡಿದಾಗ ಯೇಸುವಿನ ಬಗ್ಗೆ ಯಾವಾಗಲ್ಲ ಅವರು ಮಾತನಾಡಿದರೋ ಆ ಸಂದರ್ಭದಲ್ಲಿ ಅವರು ಹೇಗೆ ಹಿಂಸೆಗೆ ಒಳಗಾದರು ಎಂಬುದನ್ನು ನಾವು ಓದುತ್ತೇವೆ. ಅದರೆ ಹಿಂಸೆಗೆ ಒಳಗಾದಾಗ ಅವರು ನಾಚಿಕೆಪಟ್ಟಿದ್ದಾಗಲಿ ಹೆದರಿದ್ದಾಗಲಿ ನಾವು ಎಲ್ಲೂ ನೋಡುವುದಿಲ್ಲ. ಏಕೆಂದರೆ ಅವರು ಪವಿತ್ರಾತ್ಮಬರಿತರಾಗಿದ್ದರು. ಪವಿತ್ರಾತ್ಮರು ಅವರಿಗೆ ದೇವರ ವಾಕ್ಯವನ್ನು ಧೈರ್ಯವಾಗಿ ಮಾತನಾಡುವ ಸಾಮರ್ಥ್ಯವನ್ನು ನೀಡಿದರು.

ಉಪದೇಶ ಅಥವಾ ಭೋದನೆ ಮಾಡುವ ಅವಕಾಶ ನಮಗೆ ಕೊಡಲ್ಪಟ್ಟಾಗ ನಾವು ಅದನ್ನು ಧೈರ್ಯದಿಂದ ಮಾಡುತ್ತಿದ್ದಿವಾ ಅಥವಾ ಬೇರೆಯವರು ಮಾಡಲಿ ಎಂದು ಹೇಳುತ್ತೇವೆ. ಇಲ್ಲ ಈ ರೀತಿಯಾದ ಭೋದನೆ ಮತ್ತು ಉಪದೇಶಗಳನ್ನು ನಾಯಕರು ಮಾತ್ರ ಮಾಡಬೇಕೆಂದು ಅಂದು ಕೊಂಡಿದ್ದೀರಾ ?

ಎಲ್ಲಾ ನಂಬಿಗಸ್ತರಿಗೂ ಒಂದೇ ಮನಸ್ಸು ಮತ್ತು ಹೃದಯವಿತ್ತು. ಅವರು ಎಲ್ಲೆಲಿ ಹೋದರೂ ಅಲ್ಲೆಲ್ಲ ದೇವರ ವಾಕ್ಯವನ್ನು ಧೈರ್ಯವಾಗಿ ಬೋಧಿಸಿದರು.

**ಅನ್ವಯ**

ನಿಮ್ಮ ಕುಟುಂಬ ಸಭೆಯ ಒಂದು ಕೂಟದಲ್ಲಿ ಧೈರ್ಯವಾಗಿ ಬೋಧನೆ ಮಾಡಿ. ಒಂದು ವೇಳೆ ಯಾವಗಲು ನೀವೆ ಬೋದಿಸುವುವರಾದರೆ ಬೇರೆಯವರಿಗೆ ಬೋದಿಸುವ ಅವಕಾಶನ್ನು ಕೊಡಿ.

ಅನುವಾದ: ಜ್ಯೋತಿನಾಗರಾಜ್

## ದಿನ 6 : ಪವಿತ್ರಾತ್ಮರ ಬಳಿ ಸುಳ್ಳು ಹೇಳಬೇಡಿ

**ಅಪೋಸ್ತಿಲರು ಕೃತ್ಯಗಳು : 5:1–3**

1. "ಆದರೆ ಅನನೀಯನೆಂಬ ಒಬ್ಬ ಮನುಷ್ಯನು ಸಪ್ಫೈರಳೆಂಬ ತನ್ನ ಹೆಂಡತಿಯ ಸಮೇತ ಒಂದು ಭೂಮಿಯನ್ನು ಮಾರಿ 2. ಹೆಂಡತಿಯ ಸಮ್ಮತಿಯಿಂದ ಅವರ ಕ್ರಯದಲ್ಲಿ ಒಂದು ಭಾಗವನ್ನು ತಂದು ಅಪೋಸ್ತಲರ ಪಾದಗಳ ಬಳಿಯಲ್ಲಿ ಇಟ್ಟನು. 3. ಆಗ ಪೇತ್ರನು ಅನನೀಯಾ ಸೈತಾನನು ನಿನ್ನ ಹೃದಯದಲ್ಲಿ ತುಂಬಿ ಕೊಂಡದ್ದೇನು? ನೀನು ಯಾಕೆ, ಆ ಹೊಲದ ಕ್ರಯದಲ್ಲಿ ಕೆಲವನ್ನು ಬಚ್ಚಿಟ್ಟುಕೊಂಡು ಪವಿತ್ರಾತ್ಮನನ್ನು ವಂಚಿಸಿಬೇಕೆಂದಿದ್ದೀ?

ಕೆಲವೊಮ್ಮೆ ಕೆಲವು ವಿಷಯಗಳ ಮೇಲಿನ ಪ್ರೀತಿಯು ನಮ್ಮನ್ನು ಕುರುಡನನ್ನಾಗಿ ಮಾಡಿ ನಾವು ದೇವರ ಬಳಿಯಿಂದ ನಮ್ಮನ್ನು ಮರಸಿಕೊಳ್ಳಬಹುದು ಎಂದು ಅಂದುಕೊಳ್ಳಬಹುದು. ಅನನೀಯ ಪವಿತ್ರಾತ್ಮದಿಂದ ತುಂಬಿದ್ದ ಮನುಷ್ಯನು ಕ್ಷಣಮಾತ್ರದಲ್ಲಿ ಸೈತಾನನ್ನು ಅವನ ಹೃಯದಲ್ಲಿ ತುಂಬಲು ಅವಕಾಶ ಮಾಡಿದ.

ನಾವು ಯಾವವಿಷಯಗಳಿಂದ ತುಂಬಿದ್ದೀವಿ? ದೇವರ ಮೇಲಿನ ಪ್ರೀತಿಯಿಂದೆಯ ಅಥವಾ ಪ್ರಾಪಂಚಿಕ ವಿಷಯದ ಬಗೆಗಿನ ಪ್ರೀತಿಯಿಂದೆಯ. ಈ ಪ್ರಪಂಚದಲ್ಲಿನ ಸ್ನೇಹವನ್ನು ಮಾಡುವವನು ದೇವರಿಗೆ ಶತೃವಾಗಿರುವನು **(ಯಾಕೊಬ: 4:4)**

ಒಂದು ವೇಳೆ ನಾವು ಪವಿತ್ರಾತ್ಮರಿಂದ ನಡೆಸಲ್ಪಡುವವರಾದರೆ ನಾವು ಯಾವಗಲೂ ಸತ್ಯವನ್ನು ಮಾತನಾಡುತ್ತೇವೆ. ಒಂದು ವೇಳೆ ನಾವು ಬೇರೆಯವರ ಬಳಿ ಸುಳ್ಳು ಹೇಳಿದ್ದರೆ ನಾವು ದೇವರೆ ಜೊತೆ ಸುಳ್ಳು ಹೇಳಿರುತ್ತೇವೆ.

### ಅನ್ವಯ

ಈ ಹಿಂದೆ ನೀವು ಯಾರ ಬಳಿಯಾದರೂ ಸುಳ್ಳು ಹೇಳಿದ್ದರೆ. ಅವರ ಬಳಿ ಹೋಗಿ ಅರಿಕೆ ಮಾಡಿ ಕ್ಷಮಾಪಣೆಯನ್ನು ಕೇಳಿ. ಈ ಸಮಯದಿಂದ ನಾವು ಸತ್ಯವನ್ನು ಮಾತ್ರ ಮಾತನಾಡಬೇಕು.

ಆನುವಾದ: ಜ್ಯೋತಿನಾಗರಾಜ್

## ದಿನ 7 : ವಿತ್ರಾತ್ಮವನ್ನು ಪರೀಕ್ಷಿಸುವುದಕ್ಕೆ ಒಡಂಪಡಬೇಡಿರಿ

ಅಪೋಸ್ಥಲ ಕೃತ್ಯಗಳು 5:7-9

ಸುಮಾರು ಮೂರು ಘಂಟೆ ಹೊತ್ತಿನ ಮೇಲೆ ಅವನ ಹೆಂಡತಿಯು ನಡೆದ ಸಂಗತಿಯನ್ನು ತಿಳಿಯದೆ ಒಳಗೆ ಬಂದಳು. ಪೇತ್ರನು ಆಕೆಯನ್ನು ನೋಡಿ - ನೀವು ಆ ಹೊಲವನ್ನು ಮಾರಿದ್ದು ಇಷ್ಟೇ ಹಣಕ್ಕೋ? ನನಗೆ ಹೇಳು ಎಂದು ಕೇಳಲು ಆಕೆಯು - ಹೌದು, ಇಷ್ಟಕ್ಕೇ ಅಂದಳು. ಆಗ ಪೇತ್ರನು ಆಕೆಗೆ - ನೀವಿಬ್ಬರೂ ಕರ್ತನ ಆತ್ಮನನ್ನು ಪರೀಕ್ಷಿಸುವದಕ್ಕೆ ಯಾಕೆ ಒಡಂಬಟ್ಟಿರಿ? ಅಗೋ, ನಿನ್ನ ಗಂಡನನ್ನು ಹೂಣಿಟ್ಟವರು ಬಂದು ಬಾಗಿಲಿನಲ್ಲಿ ಕಾಲಿಟ್ಟಿದ್ದಾರೆ, ನಿನ್ನನ್ನೂ ಹೊತ್ತುಕೊಂಡು ಹೋಗುವರು ಎಂದು ಹೇಳಿದನು.

ಸ್ಫಫೈರಳು , ತನ್ನ ಗಂಡನಾದ ಅನಾನಿಯನಿಗೆ ಆದ ಈ ಸ್ಥಿತಿ ತಪ್ಪಿಸಬಹುದಾಗಿತ್ತು, ಆದರೆ ಅವಳೂ ಸಹ ಸತ್ಯಕ್ಕೆ ಕುರುಡಾಗಿ ಸುಳ್ಳು ಆಡಿದಳು.ನಾವು ಬಹಳವಾಗಿ ಪ್ರೀತಿಸುವ ವ್ಯಕ್ತಿಯ ಪ್ರಭಾವಕ್ಕೆ ಎಷ್ಟು ಬೇಗ ಬಿದ್ದುಹೋಗುತ್ತೇವೆ?

ದೇವರು ನಮ್ಮ ಗಮನಕ್ಕೆ ಯಾವುದಾದರೂ ತಪ್ಪನ್ನು ತೋರ್ಪಡಿಸಿದರೆ ಅಲ್ಲಿ ಸರಿಯಾದುದ್ದನ್ನೇ ಹೇಳುವುದು ಒಳ್ಳೇದು. ಭಾವನೆಗಳಲ್ಲಿ ಸಿಕ್ಕಿ ಪಾಪಮಾಡುವುದಕ್ಕಿಂತ ದೇವರಿಗೆ ಮೆಚ್ಚಿಗೆಯಾದುದ್ದನ್ನೇ ಮಾಡಲು ಗಮನಹರಿಸಬೇಕು ಇಲ್ಲದಿದ್ದರೆ, ನಮ್ಮ ಭಾವನೆಗಳು ಪವಿತ್ರಾತ್ಮವನ್ನು ಪರೀಕ್ಷಿಸಲು ಮತ್ತು ಸುಳ್ಳು ಆಡುವುದಕ್ಕೆ ಪ್ರೋತ್ಸಾಹಿಸುತ್ತವೆ.

<u>ಅನ್ವಯ</u>

ದೇವರು ನಿಮ್ಮ ಕುಟುಂಬದಲ್ಲಿ ಅಥವಾ ಸಭೆಯಲ್ಲಿ ಯಾರ ವಿಷಯವಾಗಿ ಏನಾದರೂ ತೋರ್ಪಡಿಸಿದ್ದಾರೆಯೇ? ಹಾಗಿದ್ದಲ್ಲಿ ಅವರಿಗೋಸ್ಕರ ಪ್ರಾರ್ಥನೆ ಮಾಡಿರಿ ಮತ್ತು ಪವಿತ್ರಾತ್ಮನ ಸಹಾಯದಿಂದ ಅವರೊಂದಿಗೆ ಮಾತನಾಡಿ ಅವರು ದೇವರಿಗೆ ಮೆಚ್ಚಿಗೆಯಾಗುವ ಹಾಗೆ ಜೀವನ ಮಾಡಲು ಸಹಾಯ ಮಾಡಿರಿ.

ಅನುವಾದ - ಸುಸನ್ ಮಾರ್ಕ್

---

ದಿನ 8 **:** ಪವಿತ್ರಾತ್ಮವನ್ನು ಎದುರಿಸಬೇಡಿರಿ

---

<u>ಅಪೊಸ್ತಲರ ಕೃತ್ಯಗಳು 7:51-53</u>

ಬಗ್ಗದ ಕುತ್ತಿಗೆಯುಳ್ಳವರೇ, ಹೃದಯದಲ್ಲಿಯೂ ಕಿವಿಗಳಲ್ಲಿಯೂ ಸುನ್ನತಿಯಿಲ್ಲದವರೇ, ನಿಮ್ಮ ಪಿತೃಗಳು ಹೇಗೋ ಹಾಗೆಯೇ ನೀವು ಯಾವಾಗಲೂ ಪವಿತ್ರಾತ್ಮನನ್ನು ಎದುರಿಸುವವರಾಗಿದ್ದೀರಿ. ಪ್ರವಾದಿ ಗಳಲ್ಲಿ ನಿಮ್ಮ ಪಿತೃಗಳು ಹಿಂಸೆಪಡಿಸದವರು ಯಾರಿ ದ್ದಾರೆ? ಅವರು ಆ ನೀತಿವಂತನ ಆಗಮನದ ವಿಷಯದಲ್ಲಿ ಮುಂತಿಳಿಸಿದವರನ್ನು ಕೊಂದರು. ನೀವು ಈಗ ಆತನನ್ನು ಹಿಡುಕೊಟ್ಟು ಕೊಂದವರಾದಿರಿ. ದೇವದೂತರ ಮೂಲಕ ನೇಮಕವಾದ ನ್ಯಾಯ ಪ್ರಮಾಣವನ್ನು ನೀವು ಹೊಂದಿದವರಾದರೂ ಅದನ್ನು ಅನುಸರಿಸಲಿಲ್ಲ ಎಂದು ಹೇಳಿದನು.

ದೇವರು ಆತನ ಆಜ್ಞೆಗಳಿಗೆ ವಿಧೇಯರಾಗಿ ನಡೆದುಳ್ಳುವುದಕ್ಕೆ ಅವುಗಳನ್ನು ನಮಗೆ ಕೊಟ್ಟನು. ವಿಧೇಯರಾಗದಿದ್ದರೆ, ಆತನ ಮಾರ್ಗದರ್ಶನ ನೀಡಲು ಕೆಲವು ವ್ಯಕ್ತಿಗಳನ್ನು ಕಳುಹಿಸುತ್ತಾನೆ.ಆತನು ಪ್ರವಾದಿಗಳನ್ನು ಕಳುಹಿಸಿದನು. ಆದರೆ ಆತನ ಮಾರ್ಗದರ್ಶನ ಮಾಡುವವರು ಹೀಯಾಳಿಕೆ, ಅವಮಾನ,ಸಾವಿಗೂ ತುತ್ತಾಗಿದ್ದಾರೆ ಎಂದು ಅನೇಕ ಸಲ ನಾವು ನೋಡಿದ್ದೇವೆ.,

ದೇವರ ವಾಕ್ಯ ಹೇಳಿ ಕೊಟ್ಟಿರುವ ನಿಮ್ಮ ನಾಯಕರನ್ನು ನೆನಪಿಸಿಕೊಳ್ಳಿರಿ.ಅವರ ಜೀವನಶೈಲಿ ಮತ್ತು ವಿಶ್ವಾಸವನ್ನು ಕಲಿಯಿರಿ(ಇಬ್ರಿಯ13:7). ನಿಮ್ಮ ನಾಯಕರಿಗೆ ವಿಧೇಯರಾಗಿರಿ ಮತ್ತು ನಿಮ್ಮನ್ನು ನೀವು ಅವರಿಗೆ ಒಪ್ಪಿಸಿಕೊಳ್ಳಿ. ಲೆಕ್ಕ ಒಪ್ಪಿಸುವ ಹಂಗಿನಲ್ಲಿರುವ ಅವರು ನಿಮ್ಮ ಜೀವನವನ್ನು ನೋಡುವವರಾಗಿದ್ದರೆ.ಅವರಿಗೆ ವಿಧೇಯರಾಗಿರಿ ಏಕೆಂದರೆ ಅವರ ಕೆಲಸ ಹರ್ಷ ಕೊಡುವುದಾಗಿರಬೇಕೆ ಹೊರತು ಹೊರೆಯಾಗಿರಬಾರದು. ಇದರಿಂದ ನಿಮಗೇನೂ ಲಾಭವಿಲ್ಲ (ಇಬ್ರಿಯ 13:17). ದೇವರ ವಾಕ್ಯಗಳನ್ನು ನಮ್ಮ ಜೀವನದೊಳಗೆ ಬರಮಾಡದಿದ್ದರೆ , ಪವಿತ್ರಾತ್ಮವನ್ನು ಎದುರಿಸುತ್ತೇವೆ ಎಂದರ್ಥ.

<u>ಅನ್ವಯ</u>

ಸ್ವಲ್ಪ ಸಮಯ ತೆಗೆದುಕೊಂಡು , ಹೇಗೆ ಕ್ರಿಸ್ತನಲ್ಲಿ ಇನ್ನೂ ಹೆಚ್ಚಾಗಿ ಬೆಳೆಯಬಹುದೆಂದು ಯಾರೋ ಒಬ್ಬ ನಾಯಕರೊಂದಿಗೆ ವಿಚಾರಿಸಿ.ಅವರು ಹೇಳುವುದನ್ನು ಗಮನವಿಟ್ಟು ಯಾವುದೇ ತಡೆಯಿಲ್ಲದೇ ಪವಿತ್ರಾತ್ಮವನ್ನು ಗಮನವಿಟ್ಟು ಕೇಳಿರಿ.

ಅನುವಾದ - ಸುಸನ್ ಮಾರ್ಕ್

ದಿನ 9 : ಪವಿತ್ರಾತ್ಮವನ್ನು ಹಣದಿಂದ ಖರೀದಿಸಲಾಗದು.

<u>ಅಪೋಸ್ಥಲರ ಕೃತ್ಯಗಳು 8:18-21</u>

ಅಪೊಸ್ತಲರು ಕೈಗಳನ್ನಿಡುವದರ ಮೂಲಕವಾಗಿ ಪವಿತ್ರಾತ್ಮದಾನವಾಗುವದನ್ನು ಸೀಮೋನನು ನೋಡಿ ಹಣವನ್ನು ತಂದು ಅವರ ಮುಂದಿಟ್ಟು - ನಾನು ಯಾರ ಮೇಲೆ ಕೈಗಳನ್ನಿಡುತ್ತೇನೋ ಅವರು ಪವಿತ್ರಾತ್ಮ ವರವನ್ನು ಹೊಂದುವಂತೆ ಈ ಅಧಿಕಾರವನ್ನು ನನಗೂ ಕೊಡಿರಿ ಅಂದನು. ಆದರೆ ಪೇತ್ರನು ಅವನಿಗೆ - ನಿನ್ನ ಬೆಳ್ಳಿಯು ನಿನ್ನ ಕೂಡ ಹಾಳಾಗಿಹೋಗಲಿ. ದೇವರ ವರವನ್ನು ಹಣಕ್ಕೆ ಕೊಂಡುಕೊಳ್ಳಬಹುದೆಂದು ಭಾವಿಸುತ್ತೀಯೋ? ಈ ಕಾರ್ಯದಲ್ಲಿ ನಿನಗೆ ಭಾಗವೂ ಇಲ್ಲ, ಪಾಲೂ ಇಲ್ಲ; ನಿನ್ನ ಹೃದಯವು ದೇವರ ಮುಂದೆ ಸರಿಯಿಲ್ಲ.

ಹಣವಿದ್ದರೆ ಎಲ್ಲವನ್ನೂ  ಮಾಡಬಹುದು ಎಂದು ಕೆಲವೊಮ್ಮೆ ಯೋಚಿಸಬಹುದು.ಸೀಮೋನನೂ ಸಹ ಹಣದಿಂದ ದೇವರ ವರದಾನವಾದ ಪವಿತ್ರಾತ್ಮವನ್ನು ಖರೀದಿಸಬಹುದೆಂದು ಯೋಚಿಸಿದನು.

ಆತನ ವರದಾನ ಯಾರಿಗೆ ಸಿಗಬೇಕೆಂದು ದೇವರು ನಿರ್ಧರಿಸುತ್ತಾನೆ.ದೇವರ ಅನುಮತಿ ಇಲ್ಲದೆ ಅದು ನಮಗೆ ಸಿಗದು. ಆತನ ನಿರ್ಧಾರವಿಲ್ಲದೆ ಬೇರೆಯವರಿಗೆ ಕೊಡಲು ನಮ್ಮಿಂದ ಸಾಧ್ಯವಿಲ್ಲ.ಆತನಿಗೆ ವಿಧೇಯರಾಗಿರುವವರಿಗೆ ಮಾತ್ರ ಪವಿತ್ರಾತ್ಮ ಕೊಡುತ್ತಾನೆ.

ಹಣದಿಂದ ನಾವು ಈ ವಿಷಯಗಳನ್ನು ಫಳಿಸಬಹುದು ಎಂಬ ಭಾವನೆ ನಮ್ಮಲ್ಲಿ ಇದ್ದಲ್ಲಿ ಆತನ ರಾಜ್ಯದ ಸೇವೆಯಲ್ಲಿ ನಮಗೆ ಯಾವುದೇ ಜಾಗವಿಲ್ಲ . ಯಾಕೆಂದರೆ ಆತನೊಟ್ಟಿಗೆ ನಮ್ಮ ಹೃದಯ ಸರಿಯಾಗಿಲ್ಲ.

<u>ಅನ್ವಯ</u>

ಯಾವ ಯಾವ ವಿಷಯಗಳಲ್ಲಿ ನಿಮ್ಮ ಹೃದಯ ಸರಿಯಾಗಿಲ್ಲ ಎಂದು ತೋರ್ಪಡಿಸಲು ಪವಿತ್ರಾತ್ಮವನ್ನು ವಿನಂತಿಸಿಕೊಳ್ಳಿರಿ.ಅದರಿಂದ ಹೊರತರುವಂತೆ ದೇವರಲ್ಲಿ ಪ್ರಾರ್ಥಿಸಿರಿ.

ಅನುವಾದ - ಸುಸನ್ ಮಾರ್ಕ್

ದಿನ 10 : " ಪವಿತ್ರಾತ್ಮನು ನಮ್ಮನ್ನು  ಪ್ರೋತ್ಸಾಹಿಸುತ್ತಾನೆ / ಉತ್ತೇಜಿಸುತ್ತಾನೆ "

<u>ಅಪೋಸ್ತಲರ ಕೃತ್ಯಗಳು 9.31</u>

ಹೀಗಿರಲಾಗಿ ಯೂದಾಯ ಗಲಿಲಾಯ ಸಮಾ ರ್ಯ ಸೀಮೆಗಳಲ್ಲಿದ್ದ ಸಭೆಗಳು ಭಕ್ತಿವೃದ್ಧಿ ಹೊಂದಿದವು; ಕರ್ತನ ಭಯದಲ್ಲಿ ನಡೆದು ಪವಿತ್ರಾತ್ಮನಿಂದ ಆದರಣೆ ಹೊಂದಿ ಹೆಚ್ಚುತ್ತಾ ಬಂದವು.

ಇಲ್ಲಿ ಯಾವ ರೀತಿಯಾಗಿ ಪವಿತ್ರಾತ್ಮನು ಸಭೆಗಳನ್ನು ಉತ್ತೇಜಿಸಿದ್ದಾನೆ ಮತ್ತು ಸಭೆಯು ಸಂಖ್ಯೆಯಲ್ಲಿ ಬೆಳೆದು ದೇವರ ಭಯದಲ್ಲಿ ಜೀವಿಸುತ್ತಿದ್ದರು ಎಂಬುದಾಗಿ ನೋಡುತ್ತೇವೆ,

ಪವಿತ್ರಾತ್ಮನು ಹಿಂದೆ / ಕಳೆದ ದಿನಗಳಲ್ಲಿ ಯಾವ ರೀತಿಯಾಗಿ ನಿಮ್ಮನ್ನು ಬಲಪಡಿಸಿ ಪ್ರೇರೇಪಿಸಿದೆ ಎಂದು ನೆನಪಿಸಿಕೊಳ್ಳಬಹುದಾ?

ನಮ್ಮ ಸಭೆಯಲ್ಲಾಗಲಿ ಕುಟುಂಬ ಸಭೆಯಲ್ಲಾಗಲಿ ಸಂಖ್ಯೆಯಲ್ಲಿ ಬೆಳೆಯುತ್ತಿದೆಯೇ ?

ನಾವು ದೇವರ ಭಯದಲ್ಲಿ ಜೀವಿಸುತ್ತಿದ್ದೇವೆಯೇ ?

ಶಿಷ್ಯರು ದೇವರ ಭಯದಲ್ಲಿ ಜೀವಿಸುತ್ತಿದ್ದಾರೆಯೇ ?

ನಾವು ಸಮಾಧಾನದ ಸಮಯವನ್ನು ಅನುಭವಿಸುತ್ತಿದ್ದೇವೆಯೇ ?

<u>ಅನ್ವಯ</u>

ಪವಿತ್ರಾತ್ಮನಲ್ಲಿ ಪ್ರೋತ್ಸಾಹ / ಉತ್ತೇಜನ ಮಾಡುವ ಕಾಲುವೆ ಮಾರ್ಗವಾಗಿ ನಿಮ್ಮನ್ನು ಉಪಯೋಗಿಸಲು ಅನುಮತಿಸಿರಿ, ಕುಟುಂಬ ಸಭೆಯಲ್ಲಿ ದೇವರ ಭಯ ಭಕ್ತಿಯಲ್ಲಿ ಜೀವಿಸಲು ಪರಸ್ಪರ ಒಬ್ಬರನ್ನೊಬ್ಬರು ಉತ್ತೇಜಿಸಲು / ಪ್ರೋತ್ಸಾಹಿಸಲು ಸಮಯವನ್ನು ಗುರುತಿಸಿ ಪ್ರಾರಂಭಿಸಿರಿ.

ಅನುವಾದ : ಸ್ಯಾಮುವೆಲ್.ಎಸ್ (ಕೋರಮಂಗಲ)

---

ದಿನ 11 **:** " ಆತ್ಮನ ಅನುಗುಣವಾಗಿ ಜೀವಿಸಿರಿ "

---

<u>ರೋಮಾಪುರದವರಿಗೆ 8 : 5 - 6</u>

ಶರೀರವನ್ನು ಅನುಸರಿಸುವವರು ಅದಕ್ಕೆ ಸಂಬಂಧ ಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ; ಆತ್ಮನನ್ನನುಸರಿ ಸುವವರಾದರೋ ಆತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಶರೀರಕ್ಕನುಸಾರವಾದ ಮನಸ್ಸು ಮರಣ: ಆತ್ಮೀಕವಾದ ಮನಸ್ಸುಜೀವವೂ ಸಮಾಧಾನವೂ ಆಗಿದೆ.

ನಾವು ನಮ್ಮ ದೇಹದ ಯೋಗಕ್ಷೇಮದ ವಿಷಯದಲ್ಲಿ ಹೆಚ್ಚಿನ ಗಮನವನ್ನು ಹರಿಸುತ್ತೇವೆ, ಆದರೆ ನಮ್ಮ ಮನಸ್ಸಿನ ಬಗ್ಗೆ ಕೆಲವೊಮ್ಮೆ ನಿರ್ಲಕ್ಷಿಸುತ್ತೇವೆ / ಮರೆತುಬಿಡುತ್ತೇವೆ, ಮನಸ್ಸು ಮಾನವನ ಅಂಗಾಂಗಗಳನ್ನು ನಿಯಂತ್ರಿಸುತ್ತದೆ, ಅದು ಜ್ಞಾನ, ಅರಿವು, ತಿಳುವಳಿಕೆಗಳಿಂದ ನಮ್ಮನ್ನು ದಾರಿ ನಡೆಸುತ್ತದೆ, ತನ್ನ ನೆನಪಿನ ಶಕ್ತಿಯ ಮೂಲಕವಾಗಿ ಅನುದಿನವು ನಮ್ಮನ್ನು ನಡೆಸಿ ಸಹಾಯ ಮಾಡುತ್ತದೆ,

ನಾವು ನಮ್ಮ ಮನಸ್ಸನ್ನು ಆತ್ಮನಿಗೆ ಒಪ್ಪಿಸಿದರೆ ಆಗ ಆತ್ಮನು ನಮ್ಮ ಮನಸ್ಸನ್ನು ನಿಯಂತ್ರಿಸುತ್ತಾನೆ ಯಾವ ಮನಸ್ಸು ಆತ್ಮನಿಂದ ನಿಯಂತ್ರಿಸಲ್ಪಟ್ಟಿರುತ್ತದೊ ಅವರ ಜೀವಿತವು ಶಾಂತಿ ಮತ್ತು ಸಮಾಧಾನದಿಂದ ತುಂಬಿರುತ್ತದೆ, ಇಲ್ಲವಾದಲ್ಲಿ ನಮ್ಮ ಮನಸ್ಸು ಪಾಪಭರಿತ ವಿಷಯಗಳಲ್ಲಿ ಮಗ್ನವಾಗಿ ಬಿಡುತ್ತದೆ, ಮತ್ತು ಪಾಪಧೀನನ ಮನಸ್ಸು ಮರಣವಾಗಿರುತ್ತದೆ.

<u>ಅನ್ವಯ</u>

ನಮ್ಮ ಮನಸ್ಸು ಆತ್ಮನಿಂದ ನಿಯಂತ್ರಿಸಲ್ಪಟ್ಟಿದೆಯೋ ? ಅಥವಾ ಪಾಪಾಧೀನ ಸ್ವಭಾವಗಳಿಂದ ನಿಯಂತ್ರಿಸಲ್ಪಟ್ಟಿದೆಯೋ ? ಎಂದು ಪರೀಕ್ಷಿಸಲು ನಮ್ಮ ಆಸೆ ಮತ್ತು ಆಸಕ್ತಿಗಳ ಪಟ್ಟಿಯನ್ನು ಬರೆಯಿರಿ.

ಅನುವಾದ : ಸ್ಯಾಮುವೆಲ್.ಎಸ್ (ಕೋರಮಂಗಲ)

---

ದಿನ 12 **:** " ಆತ್ಮನು ನಮಗಾಗಿ ಮಧ್ಯಸ್ಥಿಕೆ / ವಿಜ್ಞಾಪನೆ ಮಾಡುತ್ತಾನೆ "

---

<u>ರೋಮಾಪುರದವರಿಗೆ 8 : 26 - 27</u>

ಹಾಗೆಯೇ ಆತ್ಮನು ಸಹ ನಮ್ಮ ಬಲಹೀನತೆ ಗಳಿಗೆ ಸಹಾಯಮಾಡುತ್ತಾನೆ; ಹೇಗಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲವಾದ್ದರಿಂದ ಆತ್ಮನು ತಾನೇ ಉಚ್ಚರಿಸಲಾಗ ದಂಥ ನರಳಾಟದಿಂದ ನಮಗೋಸ್ಕರ ವಿಜ್ಞಾಪನೆ ಮಾಡುತ್ತಾನೆ. ಆದರೆ ಹೃದಯಗಳನ್ನು ಶೋಧಿಸು ವಾತನಿಗೆ ಆತ್ಮನ ಮನೊಭಾವವು ಏನೆಂದು ತಿಳಿದದೆ; ಆ ಆತ್ಮನು ದೇವರ ಚಿತ್ತಾನುಸಾರವಾಗಿ ಪರಿಶುದ್ಧರಿ ಗೋಸ್ಕರ ವಿಜ್ಞಾಪನೆ ಮಾಡುತ್ತಾನೆ.

ನಿಮಗೆ ಯಾವುದಾದರೂ ಕಚೇರಿಗೆ ಹೋಗಿ ಯಾವುದೇ ಒಂದು ಪ್ರಮಾಣ ಪತ್ರವನ್ನು ಪಡೆದಕೊಂಡ ಅನುಭವದ ನೆನಪಿದೆಯೇ? ಆ ಕಚೇರಿಯಲ್ಲಿ ಯಾರ ಮುಖ ಪರಿಚಯವು ನಮಗಿರುವುದಿಲ್ಲ, ಅಲ್ಲಿನ ಕಾರ್ಯವಿಧಾನವನ್ನು ಅರಿಯಲು ಹೋರಾಟ ನಡೆಸುತ್ತಿರುವಾಗ ಯಾರೋ ಒಬ್ಬ ವ್ಯಕ್ತಿಯು ಬಂದು ಆ ಪತ್ರವನ್ನು ಪಡೆಯಲು ನಮಗೆ ಸಹಾಯ ಮಾಡಿದ್ದು ಮತ್ತು ನಾವು ಸಮಾಧಾನದಿಂದ ಕಚೇರಿಯಿಂದ ಹೊರಬಂದದ್ದು, ಈ ರೀತಿಯಾದ ಯಾವುದಾದರೂ ಸಂದರ್ಭ ನೆನಪಿದೆಯೇ?

ಪವಿತ್ರಾತ್ಮನು ನಮ್ಮ ಬಲಹೀನತೆಯಲ್ಲಿ ಸಹಾಯ ಮಾಡುವವನಾಗಿದ್ದಾನೆ, ಕೆಲವೊಂದು ಸಂದರ್ಭದಲ್ಲಿ ಏನು ಮಾಡಬೇಕೆಂದು ತೋಚದಿರುತ್ತೇವೆ, ಸರ್ವೇ ಸಾಮಾನ್ಯವಾಗಿ ನಾವೆಲ್ಲರೂ ನಮ್ಮ ಪ್ರಾರ್ಥನಾ ಜೀವಿತದಲ್ಲಿ ತೊಳಲಾಡುತ್ತಿರುತ್ತೇವೆ, ಹೇಗೆ ಪ್ರಾರ್ಥಿಸಬೇಕು ಏನು ಪ್ರಾರ್ಥಿಸಬೇಕು ಎಂಬ ಗೊಂದಲದಲ್ಲಿ ಇರುತ್ತೇವೆ, ಆ ಸಂದರ್ಭದಲ್ಲಿ ಪವಿತ್ರಾತ್ಮನು ನಮ್ಮ ಪ್ರಾರ್ಥನಾ ಜೀವಿತಕ್ಕಾಗಿ ಸಹಾಯ ಮಾಡುತ್ತಾನೆ, ಶಬ್ದಗಳಲ್ಲಿ ವ್ಯಕ್ತಪಡಿಸಲಾರದಂತ ನರಳಿಕೆಯ ರೀತಿಯಲ್ಲಿ ನಮಗಾಗಿ ಪ್ರಾರ್ಥಿಸುತ್ತಾನೆ, ದೇವರ ಚಿತ್ತಾನುಸಾರವಾಗಿ ನಮಗಾಗಿ ಆತ್ಮನು ದೇವರಲ್ಲಿ ಪ್ರತಿವಿಜ್ಞಾಪಿಸುತ್ತಾನೆ.

ಅನ್ವಯ

ಪ್ರಾರ್ಥನಾ ಜೀವಿತದಲ್ಲಿ ಬೆಳೆಯಲು / ಉತ್ತಮಗೊಳ್ಳಲು ಸಹಾಯ ಮಾಡಿರೆಂದು ಪವಿತ್ರಾತ್ಮನಲ್ಲಿ ಪ್ರಾರ್ಥಿಸಿರಿ, ಆತನ ಮಾರ್ಗದರ್ಶನಕ್ಕನುಗುಣವಾಗಿ ಪ್ರಾರ್ಥಿಸಿರಿ ಇದರಿಂದ ಆಗುವ ಬೆಳವಣಿಗೆ / ಅಭಿವೃದ್ಧಿಯನ್ನು ಅನುಭವಿಸಿ ಉಲ್ಲಾಸಿಸಿರಿ.

ಅನುವಾದ : ಸ್ಯಾಮುವೆಲ್.ಎಸ್ (ಕೋರಮಂಗಲ)

---

ದಿನ 13 **:** ಪವಿತ್ರಾತ್ಮನಲ್ಲಿ ನೀ-ಸ-ಹ

---

ರೋಮಾಪುರದವರಿಗೆ 14:17-18

ಯಾಕಂದರೆ ತಿನ್ನುವದೂ ಕುಡಿಯುವದೂ ದೇವರ ರಾಜ್ಯವಲ್ಲ; ಆದರೆ ನೀತಿಯೂ ಸಮಾಧಾನವೂ ಪವಿತ್ರಾತ್ಮನಲ್ಲಿರುವ ಆನಂದವೂ ಆಗಿದೆ. ಕ್ರಿಸ್ತನ ಸೇವೆಯನ್ನು ಮಾಡುವವನು ಈ ವಿಷಯಗಳಲ್ಲಿ ದೇವರಿಗೆ ಮೆಚ್ಚಿಕೆಯಾದವನಾಗಿಯೂ ಮನುಷ್ಯರಿಗೆ ಸಂಭಾವಿತನಾಗಿಯೂ ಇರುವನಷ್ಟೆ. ಆದದರಿಂದ ನಾವು ಸಮಾಧಾನವನ್ನುಂಟು ಮಾಡುವವುಗಳನೂ ಪರಸ್ಪರ ಭಕ್ತಿವೃದ್ಧಿಯನ್ನುಂಟು ಮಾಡುವವುಗಳನ್ನೂ ಅನುಸರಿಸೋಣ.

ನಾವು ದೇವರ ರಾಜ್ಯದಲ್ಲಿದ್ದೇವೆ. ನಾವೆಲ್ಲರೂ ಕ್ರಿಸ್ತನ ಸೇವೆ ಮಾಡಲು ಬಯಸುತ್ತೇವೆ ಆದರೆ, ನಾವು ಹೇಗೆ ಕ್ರಿಸ್ತನಿಗೆ ಸೇವೆ ಸಲ್ಲಿಸುತ್ತೇವೆ ಎಂಬುದು ಹೆಚ್ಚು ಮುಖ್ಯವಾದುದಾಗಿದೆ? ಈ ಮೇಲಿನ ವಚನವು ಹೇಳುವ ರೀತಿಯಾಗಿ ಕ್ರಿಸ್ತನನ್ನು ಸೇವಿಸುವವರು ದೇವರಿಗೆ ಮೆಚ್ಚಿಕೆಯಾದವನಾಗಿಯೂ ಮನುಷ್ಯರಿಗೆ ಸಂಭಾವಿತನಾಗಿಯೂ ಇರುವನು.

ನಾವು ಪವಿತ್ರಾತ್ಮನಲ್ಲಿ ನೀತಿ, ಸಮಾಧಾನ ಮತ್ತು ಹರ್ಷ ಇವುಗಳಲ್ಲಿ  ಕೇಂದ್ರೀಕರಿಸುತ್ತೇವೆಯೇ? ಪರಸ್ಪರ ಭಕ್ತಿವೃದ್ಧಿಯನ್ನುಂಟು ಮಾಡುವವುಗಳಲ್ಲಿ ಕೇಂದ್ರೀಕರಿಸುತ್ತೇವೆಯೇ? ನಾವು ನೀತಿವಂತಿಕೆಯಿಂದ ಇರದಿದ್ದರೆ, ನಾವು ಸಮಾಧಾನ ಮತ್ತು ಹರ್ಷವನ್ನು ಕಳೆದುಕೊಳ್ಳುತ್ತೇವೆ.

ಆದದರಿಂದ ನಾವು ಯಾವ ವಿಷಯವು ಸಮಾಧಾನವನ್ನುಂಟು ಮಾಡುವದೋ ಪರಸ್ಪರ ಭಕ್ತಿವೃದ್ಧಿಯನ್ನುಂಟು ಮಾಡುವದೋ ಅವುಗಳನ್ನು ಮಾಡುವುದಕ್ಕೆ ಪ್ರಯಾಸ ಪಡೋಣ.

ಅನ್ವಯ

ತಮ್ಮ ಜೀವನದಲ್ಲಿ ಶಾಂತಿಯನ್ನು ತೆಗೆದು ಹಾಕುತ್ತಿರುವ ಯಾವುದಾದರು ವಿಷಯ ಇದೆಯೇ? ಹಾಗಿದ್ದರೆ ಪವಿತ್ರಾತ್ಮನು ನೀಡುವ ಸಹಾಯ ಕೇಳಿ ಮತ್ತು ಸಮಾಧಾನ ಮತ್ತು ಹರ್ಷವನ್ನು ಪಡೆಯುವ ಸಲುವಾಗಿ ಪವಿತ್ರಾತ್ಮನ ಸಹಾಯ ಮತ್ತು ಸಲಹೆಯನ್ನು ಪಡೆದು, ಆ ವಿಷಯಗಳನ್ನು ಸರಿಪಡಿಸಲು ಪ್ರಯತ್ನಿಸಿ. ಆದರೆ ಮೊದಲು ನೀವು ದೇವರ ರಾಜ್ಯವನ್ನೂ ಆತನ ನೀತಿಯನ್ನೂ ಹುಡುಕಿರಿ, (ಮತ್ತಾಯ6:33) ಎಂಬ ಆಜ್ಞೆಯನ್ನು ನೆರವೇರಿಸುವತ್ತ ಹೆಜ್ಜೆಯಿಡಿರಿ.

ಅನುವಾದ : ಶಾಲಿನಿ ಅಬ್ರಾಹಾಮು ಕಲಕೇರಿ

---

## ದಿನ 14 : ಪವಿತ್ರಾತ್ಮನು ಎಲ್ಲವನ್ನು ಪರಿಶೋಧಿಸುತ್ತಾನೆ

---

1ನೇ ಕೊರಿಂಥ 2:9-11

ಆದರೆ ಬರೆದಿರುವ ಪ್ರಕಾರ--ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥವುಗಳನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಇಲ್ಲವೆ ಅವು ಮನುಷ್ಯನ ಹೃದಯದಲ್ಲಿ ಸೇರಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅವುಗಳನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ಹೌದು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ. ಮನುಷ್ಯನ ಒಳಗಿನ ವಿಷಯಗಳು ಅವನಲ್ಲಿರುವ ಆತ್ಮಕ್ಕೆ ಹೊರತು ಮತ್ತಾರಿಗೆ ತಿಳಿದಾವು? ಹಾಗೆಯೇ ದೇವರ ವಿಷಯಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವದಿಲ್ಲ.

ದೇವರು ನಮ್ಮನ್ನು ಪ್ರೀತಿಸುತ್ತಾನೆ. ದೇವರು ನಮಗೆ ವಿಶೇಷವಾದದೊಂದನ್ನು ಸಿದ್ಧಪಡಿಸಿದ್ದಾರೆ. ಅವರು ತನ್ನ ಆತ್ಮನಿಂದ ನಮಗೆ ಅದನ್ನು ಪ್ರಕಟಿಸಿದನು. ದೇವರು ನಮಗೆ ಬಹಿರಂಗ ಪಡಿಸಿದ್ದು/ಪ್ರಕಟಪಡಿಸಿದ್ದು ಏನೆಂದರೆ ಅದು "ಯೇಸುಕ್ರಿಸ್ತನು". ಆತ್ಮನು ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ.

ನಿಮಗೆ ಯಾರೊಬ್ಬರ ಆಲೋಚನೆಗಳನ್ನು ತಿಳಿಯುವ ಸಾಮರ್ಥ್ಯವಿದೆಯೇ, (ನಮಗೆ ತೀರಾ ಹತ್ತಿರ ಇರುವವರನ್ನು ಕೂಡಾ ಸೇರಿಸಿ?) ಆದರೆ ನಮ್ಮೊಳಗಿನ ಆತ್ಮನು ನಮಗೆ ದೇವರ ಆಲೋಚನೆಗಳು ತಿಳಿಯಲು ಸಹಾಯ ಮಾಡುತ್ತಾನೆ.

ಅನ್ವಯ

ಅಂತಹ ಅದ್ಭುತವಾದ ಉಡುಗೊರೆಯನ್ನು ದೇವರು ನಮಗೆ ನೀಡಿರುವುದರ ಬಗ್ಗೆ ಯೋಚಿಸಿ, ನಾವೆಷ್ಟು ವಿಶೇಷವಾದವರೆಂದು ಭಾವಿಸಿಕೊಳ್ಳಬೇಕು. ಪವಿತ್ರಾತ್ಮನನ್ನು ಅದ್ಭುತ ಉಡುಗೊರೆಗಾಗಿ ಕೊಟ್ಟಿದ್ದಕ್ಕೆ ದೇವರಿಗೆ ಧನ್ಯವಾದ ಸಲ್ಲಿಸಲು ಸಮಯ ತೆಗೆದುಕೊಳ್ಳಿ.

ಅನುವಾದ : ಶಾಲಿನಿ ಅಬ್ರಾಹಾಮು ಕಲಕೇರಿ

ದಿನ 15 **:** ನಿಮ್ಮ ದೇಹವು ಪವಿತ್ರಾತ್ಮನ ಆಲಯವಾಗಿದೆ.

1ನೇ ಕೊರಿಂಥದವರಿಗೆ 3:16-17

ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ? ಯಾವನಾದರೂ ದೇವರ ಆಲಯವನ್ನು ಹೊಲೆಮಾಡಿದರೆ ದೇವರು ಅವನನ್ನು ನಾಶಮಾಡುವನು; ಯಾಕಂದರೆ ದೇವರ ಆಲಯವು ಪವಿತ್ರವಾದದ್ದು, ಆ ಆಲಯವು ನೀವೇ.

ಮಂದಿರ/ ದೇವಾಲಾಯ ಕಟ್ಟಡಕ್ಕೆ ಹೋಗುವಾಗ ನೀವು ಒಳಗಿರುವ ಎಲ್ಲಾ ರೀತಿಯ ಪಾಪದ ವಿಷಯಗಳನ್ನು ನೋಡುತ್ತೀರಿ. ನಾವು ಅಸಮಾಧಾನ ಪಡುವುದಿಲ್ಲವೇ? ಕೆಲವೊಮ್ಮೆ ನಮ್ಮ ಅನ್ಯೋನ್ಯತೆಯಲ್ಲಿ ನಡೆಯುತ್ತಿರುವ ಕೆಲವು ವಿಷಯಗಳನ್ನು ನೋಡಿದಾಗ ನಾವು ಕೋಪಗೊಳ್ಳುತ್ತೇವೆ.

ಅದೇ ರೀತಿಯಾಗಿ, ನಮ್ಮ ದೇಹವೂ ಎಲ್ಲಾ ಪಾಪದ ವಿಷಯಗಳಿಂದ ಮುಕ್ತವಾಗಿರಬೇಕು. ಜಾರತ್ವಕ್ಕೆ ದೂರವಾಗಿ ಓಡಿಹೋಗಿರಿ. ಮನುಷ್ಯರು ಮಾಡುವ ಇತರ ಪಾಪಕೃತ್ಯಗಳು ದೇಹಕ್ಕೆ ಹೊರತಾಗಿವೆ. ಆದರೆ ಜಾರತ್ವ ಮಾಡುವವನು ತನ್ನ ಸ್ವಂತ ದೇಹಕ್ಕೆ ವಿರೋಧವಾಗಿ ಪಾಪವನ್ನು ಮಾಡುತ್ತಾನೆ. (1ನೇ ಕೊರಿಂಥದವರಿಗೆ 6:18)

ನೀವು ಕ್ರಯಕ್ಕೆ ಕೊಂಡುಕೊಳ್ಳಲ್ಪಟ್ಟವರಾಗಿದ್ದೀರಿ; ಆದದರಿಂದ ದೇವರ ಸೊತ್ತಾಗಿರುವ ನಿಮ್ಮ ದೇಹದಲ್ಲಿಯೂ ನಿಮ್ಮ ಆತ್ಮದಲ್ಲಿಯೂ ದೇವರನ್ನು ಮಹಿಮೆಪಡಿಸಿರಿ.(1ನೇ ಕೊರಿಂಥದವರಿಗೆ 6:20)

ಅನ್ವಯ

ಪಾಪದ ಚಟುವಟಿಕೆಗಾಗಿ ನಿಮ್ಮ ದೇಹದ ಭಾಗಗಳನ್ನು  ತೊಡಗಿಸಿದಲ್ಲಿ ನಿರ್ದಿಷ್ಟವಾಗಿ ಕ್ಷಮೆ ಮತ್ತು ಪಶ್ಚಾತ್ತಾಪಕ್ಕಾಗಿ ಮಾನಸಾಂತರ ಹೊಂದಿ ಮತ್ತು ಪ್ರಾರ್ಥಿಸಲು ಸಮಯ ತೆಗೆದುಕೊಳ್ಳಿ. ದೇವರನ್ನು ಗೌರವಿಸುವ ಸಲುವಾಗಿ ದೇಹದ ಅದೇ ಭಾಗಗಳನ್ನು ನೀಡಲು ಪವಿತ್ರಾತ್ಮ ನ ಸಹಾಯದಿಂದ ಯೋಜನೆಗಳನ್ನು ಕೂಡ ಮಾಡಿ.

ಅನುವಾದ : ಶಾಲಿನಿ ಅಬ್ರಾಹಾಮ ಕಲಕೇರಿ

ದಿನ 16 **:** " ಆತ್ಮನ ಆವಿಷ್ಕರಣ / ಪ್ರಕಟನೆ "

1 ಕೊರಿಂಥದವರಿಗೆ 12 : 4 - 7

4, ವರಗಳಲ್ಲಿ ಬೇರೆ ಬೇರೆ ವಿಧಗಳುಂಟು ದೇವರಾತ್ಮನು ಒಬ್ಬನೇ, 5, ಸೇವೆಗಳಲ್ಲಿ ಬೇರೆ ಬೇರೆ ವಿಧಗಳುಂಟು ಕರ್ತನು ಒಬ್ಬನೇ, 6, ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು, ಸರ್ವರಲ್ಲಿಯೂ ಸರ್ವಕಾರ್ಯಗಳನ್ನು ಸಾಧಿಸುವ ದೇವರು ಒಬ್ಬನೇ 7, ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿವೆ.

ನಮ್ಮಲ್ಲಿ ಪ್ರತಿಯೊಬ್ಬರೂ ಅವರದೇ ಆದಂತಹ  ವಿಶೇಷತೆ ಮತ್ತು ವಿಭಿನ್ನತೆಗಳನ್ನು ಹೊಂದಿರುತ್ತೇವೆ, ಆದರೆ ನಮ್ಮೊಳಗಿರುವ ಆತ್ಮವು ಒಂದೇ, ಆದ ಕಾರಣ ಪ್ರತಿಯೊಬ್ಬ ಶಿಷ್ಯನಿಗೂ ಒಂದೇ ರೀತಿಯಾದ / ಸಮನಾದ ಕಾಳಜಿ / ಲಕ್ಷ್ಯ

/ ಆಸಕ್ತಿಯನ್ನು ತೋರಿಸುವುದು ಅವಶ್ಯವಿದೆ, ಕೆಲವೊಮ್ಮೆ ವ್ಯಕ್ತಿಗತವಾಗಿ ಅವರಿಗೆ ಕೊಟ್ಟಿರುವ ಆತ್ಮನ ವರಗಳನ್ನಾಧರಿಸಿ / ಅವರು ಮಾಡುವ ಸೇವೆಗಳನ್ನಾಧರಿಸಿ ವಿಶೇಷವಾದ ಗಮನ / ಕಾಳಜಿ ತೋರಿಸಲು ಪ್ರಚೋದಿತರಾಗುತ್ತೇವೆ,

ನಾವಾರಾಧಿಸುವ ಏಕೈಕ ದೇವನೊಬ್ಬನೇ ಸಕಲ ಕಾರ್ಯಗಳನ್ನು ಸಕಲರಲ್ಲಿಯೂ ನೆರವೇರಿಸುವನಾಗಿದ್ದಾನೆ. ಮತ್ತು ಪ್ರತಿಯೊಬ್ಬನಿಗು ಕರ್ತನು ಕೊಟ್ಟಿರುವ ಆತ್ಮನ ಪ್ರಕಟನೆಗಳು ಸರ್ವರ ಒಳಿತಿಗಾಗಿಯೇ ಕೊಡಲ್ಪಟ್ಟಿದೆ,

ಏನೆಲ್ಲಾ ಆತ್ಮನ ವರಗಳನ್ನು ನಾವು ಹೊಂದಿದ್ದೇವೊ ಆ ವರಗಳನ್ನು ಸರ್ವರ ಒಳಿತಿಗಾಗಿ ಉಪಯೋಗಿಸುತ್ತಿದ್ದಿವಾ?

<u>ಅನ್ವಯ</u>

( ಅ ) ಕರ್ತನು ನಿಮಗೆ ಕೊಟ್ಟಿರುವ ಪವಿತ್ರಾತ್ಮನ ವರ ಯಾವುದೆಂದು ಗುರುತಿಸಿಕೊಳ್ಳಿರಿ,

( ಆ ) ಆ ವರಕ್ಕಾಗಿ ದೇವರಿಗೆ ಕೃತಜ್ಞತೆ ಸ್ತೋತ್ರವನ್ನು ಅರ್ಪಿಸಿರಿ,

( ಇ ) ಕೊಟ್ಟಿರುವ ವಿಶೇಷ ಪವಿತ್ರಾತ್ಮ ವರವನ್ನು ಕುಟುಂಬ ಸಭೆಯಲ್ಲಿಯೂ ಮತ್ತು ಸಭೆಯಲ್ಲಿಯೂ ಯಾವ ರೀತಿಯಾದ ಸೇವೆಯನ್ನು ಮಾಡಬಹುದೆಂದು ಯೋಚಿಸಿ ಸೇವಾ ಸನ್ನದರಾಗಿ.

ಅನುವಾದ : ನಾರಾಯಣ್ ಜೋಸೆಫ್ "KK"

---

ದಿನ - **17** : ಆತ್ಮನ ಕೆಲಸವನ್ನು ದೇವರು ನಿಷ್ಕರ್ಷಿಸಿರುತ್ತಾರೆ / ನಿಶ್ಚಯಿಸುತ್ತಾರೆ "

---

<u>1 ಕೊರಿಂಥದವರಿಗೆ 12 : 8 - 11</u>

8, ಒಬ್ಬನಿಗೆ ದೇವರಾತ್ಮನ ಮೂಲಕ ಜ್ಞಾನವಾಕ್ಯವು ಒಬ್ಬನಿಗೆ ಆ ಆತ್ಮನಿಗೆ ಅನುಗುಣವಾಗಿ ವಿಧ್ಯಾವಾಕ್ಯವು, 9, ಒಬ್ಬನಿಗೆ ಆ ಆತ್ಮನಿಂದಲೇ ನಂಬಿಕೆಯು ಒಬ್ಬನಿಗೆ ಆ ಆತ್ಮನಿಂದಲೇ ನಾನಾ ರೋಗಗಳನ್ನು ವಾಸಿ ಮಾಡುವ ವರವು,10, ಒಬ್ಬನಿಗೆ ಮಹತ್ತುಗಳನ್ನು ಮಾಡುವ ವರವು, ಒಬ್ಬನಿಗೆ ಪ್ರವಾದನೆಯ ವರವು, ಒಬ್ಬನಿಗೆ ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವ ವರವು, ಒಬ್ಬನಿಗೆ ವಿವಿಧ ವಾಣಿಗಳನ್ನಾಡುವ ವರವು, ಒಬ್ಬನಿಗೆ ವಾಣಿಗಳ ಅರ್ಥವನ್ನು ಹೇಳುವ ವರವು ಕೊಡಲ್ಪಡುತ್ತವೆ, 11, ಈ ವರಗಳನ್ನೆಲ್ಲಾ ಆ ಒಬ್ಬ ಆತ್ಮನೇ ತನ್ನ ಚಿತ್ತಕ್ಕೆ ಬಂದ ಹಾಗೆ ಒಬ್ಬೊಬ್ಬನಿಗೆ ಹಂಚಿಕೊಟ್ಟು ನಡಿಸುತ್ತಾನೆ.

ನಾವು ಪರಸ್ಪರ ನಿರಂತರವಾಗಿ ಅನ್ಯೋನ್ಯತೆ ಯಲ್ಲಿದ್ದಾಗ ಶಿಷ್ಯರಿಗೆ ಕೊಡಲ್ಪಟ್ಟಿರುವ ಅನೇಕ ವಿಭಿನ್ನವಾದ ಆತ್ಮನ ವರಗಳನ್ನು ಕಾಣಬಹುದು. ಎಲ್ಲಾ ಕಾರ್ಯಗಳು ಒಬ್ಬನದೆ ಆಗಿದ್ದು ಒಂದೇ ಆತ್ಮನದಾಗಿದೆ. ಅದೇನೆ ಆಗಿದ್ದರೂ ನಮಗೆ ಏನು ವರ ಬೇಕೆಂದು ನಾವು ಆಯ್ಕೆ ಮಾಡುವಂತಿಲ್ಲ, ಏನು / ಎಂತಹ ವರ ಬೇಕೆಂದು ಆಸೆ ಪಡಬಹುದೇ ಹೊರತು ಏನು ನೀಡಬೇಕೆಂದು ದೇವರು ನಿಷ್ಕರ್ಷಿಸಿರುತ್ತಾರೆ / ನಿರ್ಧರಿಸಿರುತ್ತಾರೆ.

ಪವಿತ್ರಾತ್ಮನ ವರಗಳನ್ನು ದೇವರು ತನ್ನ ಚಿತ್ತಾನುಸಾರವಾಗಿ ಹಂಚಿರುತ್ತಾರೆ / ದಯಪಾಲಿಸಿರುತ್ತಾರೆ, ನಿಮಗೆ ಕೊಟ್ಟಿರುವ ವರಗಳನ್ನು ಗುರುತಿಸಿದ್ದೀರಾ ? ಆ ವರವನ್ನು ಸಕಲರ ಒಳಿತಿಗಾಗಿ ಉಪಯೋಗಿಸುತ್ತಿದ್ದಿರಾ?

ನಮ್ಮಲ್ಲಿ ಪ್ರತಿಯೊಬ್ಬರಿಗೂ ವಿಭಿನ್ನವಾದ ವರಗಳು ಇದ್ದರೂ ಸಹ ಪರಸ್ಪರರ ಅವಶ್ಯಕತೆ ಇರುತ್ತದೆ, ಈ ಮೂಲಕವಾಗಿ ದೇವರು ನಮ್ಮೆಲ್ಲರನ್ನು ಒಟ್ಟುಗೂಡಿಸಿ ಆತನ ರಾಜ್ಯವನ್ನು ಕಟ್ಟಲು ಸಂಕಲ್ಪಿಸಿರುತ್ತಾರೆ.

<u>ಅನ್ವಯ</u>

ದೇವರು ನಮಗೆ ಕೊಟ್ಟಿರುವ ಪವಿತ್ರಾತ್ಮನ ವರಗಳ ಮೂಲಕ ಆತನ ರಾಜ್ಯವನ್ನು ಕಟ್ಟಲು ನಮ್ಮನ್ನು ಪ್ರಬಲವಾಗಿ / ಹೆಚ್ಚಾಗಿ ಉಪಯೋಗಿಸಿಕೊಳ್ಳುವಂತೆ ಪ್ರಾರ್ಥಿಸಿರಿ.

ಅನುವಾದ : ನಾರಾಯಣ್ ಜೋಸೆಫ್ "KK"

---

ದಿನ 18 " ಆತ್ಮವು ಜೀವವನ್ನುಂಟುಮಾಡುತ್ತದೆ "

---

2 ಕೊರಿಂಥದವರಿಗೆ 3 : 5 - 6

5, ನಮ್ಮಿಂದಲೇ ಏನಾದರೂ ಉಂಟಾಯಿತೆಂದು ತೀರ್ಮಾನಿಸಿಕೊಳ್ಳುವದಕ್ಕೆ ನಮ್ಮಷ್ಟಕ್ಕೆ ನಾವೇ ಸಮರ್ಥರೆಂತಲ್ಲ ನಮಗಿರುವ ಸಾಮರ್ಥ್ಯವು ದೇವರಿಂದಲೇ ಬಂದದ್ದು, 6, ಆತನು ಹೊಸ ಒಡಂಬಡಿಕೆಗೆ ಸೇವಕರಾಗಿರುವ ಸಾಮರ್ಥ್ಯವನ್ನು ನಮಗೆ ಅನುಗ್ರಹಿಸಿದ್ದಾನೆ, ಈ ಒಡಂಬಡಿಕೆಯು ಲಿಖಿತ ರೂಪವಾಗಿರದೆ ದೇವರಾತ್ಮ ಸಂಭಂಧವಾದದ್ದಾಗಿದೆ, ಲಿಖಿತರೂಪವಾದ ಒಡಂಬಡಿಕೆಯು ಮರಣವನ್ನುಂಟುಮಾಡುತ್ತದೆ, ದೇವರಾತ್ಮ ಸಂಬಂಧವಾದದ್ದು ಜೀವವನ್ನುಂಟುಮಾಡುತ್ತದೆ.

ನಾವು ಬಲ್ಲವರಾಗಿ / ಶಕ್ತರಾಗಿ ಇರುವುದು ಅವಶ್ಯವಾಗಿದೆ ( ಸಮರ್ಥರಾಗಿ / ದಕ್ಷರಾಗಿ ) ದೇವರು ನಮ್ಮನ್ನು ಆತನ ಹೊಸ ಒಡಂಬಡಿಕೆಯ ಸೇವೆಗೆ ಶಕ್ತರನ್ನಾಗಿ ಮಾಡಿದ್ದಾನೆ, ಅಕ್ಷರವು ( ಧರ್ಮಶಾಸ್ತ್ರ ) ಬಾಹ್ಯ ಅರ್ಥದಲ್ಲಿ ಧರ್ಮಶಾಸ್ತ್ರವಾಗಿದ್ದು ಕಲ್ಲಿನ ಹಲಗೆಯ ಮೇಲೆ ಕೆತ್ತಿರುವಂತದಾಗಿದೆ, ಧರ್ಮಶಾಸ್ತ್ರದ ಅಕ್ಷರ ಹಳೆಯ ಒಡಂಬಡಿಕೆಯಿಂದ ಬಂದಿರುತ್ತದೆ.

ಆದರೆ ಈ ಹೊಸ ಒಡಂಬಡಿಕೆಯಲ್ಲಿ, ನಮ್ಮೊಳಗೆ ವಾಸವಾಗಿರುವಂತ ಆತ್ಮವಾದರೋ ನಮ್ಮ ಹೃದಯದ ಮೇಲೆ ಬರೆದಿರುವಂತಹ ಧರ್ಮಶಾಸ್ತ್ರವಾಗಿರುತ್ತದೆ, ಆತ್ಮನು ಮಾರ್ಗದರ್ಶಕನಕೊಡುವುದಕ್ಕೂ ನಮ್ಮ ಧರ್ಮಶಾಸ್ತ್ರವಾಗಿರುವುಗಕ್ಕೂ ನಮ್ಮೊಳಗಿದ್ದಾನೆ, ಏನೇ ಆಗಿದ್ದರು ಆತ್ಮನು ಮತ್ತು ಅಕ್ಷರವು / ಲಿಖಿತವು ವೈರಿಗಳಲ್ಲ, ಇವೆರಡು ಇಜ್ಜೋಡಾಗಿದ್ದುಕೊಂಡು ಕಾರ್ಯನಿರ್ವಹಿಸುತ್ತವೆ, ಆದರೂ ಆತ್ಮನಿಂದ ಬಂದದ್ದು ಉತ್ಕೃಷ್ಟ / ಶ್ರೇಷ್ಠ ಮಟ್ಟದಾಗಿರುತ್ತದೆ, ಆತ್ಮವು ಜೀವವನ್ನುಂಟುಮಾಡುತ್ತದೆ.

ಅನ್ವಯ

ನೀವು ಕರ್ತನ ಸೇವಕರಾಗಿ ಉತ್ಕೃಷ್ಟ / ದಕ್ಷರಾಗಿ / ಸಮರ್ಥರಾಗಿ ಇದ್ದೀರಾ ? ನೀವು ದೇವರ ಸಮರ್ಥ ಸೇವಕರಾಗಿರುವುದಕ್ಕೆ ಆತ್ಮೀಕವಾಗಿ ಬೆಳೆಯಬೇಕಾದ ವಲಯಗಳನ್ನು / ವಿಷಯಗಳನ್ನು ಗುರುತಿಸಿರಿ, ಪವಿತ್ರಾತ್ಮನು ನಿಮ್ಮನ್ನು ಸಮರ್ಥ ಸೇವಕರಾಗಿ ಮಾಡಲು ಪ್ರಾರ್ಥಿಸಿರಿ.

ಅನುವಾದ : ನಾರಾಯಣ್ ಜೋಸೆಫ್ "KK"

ದಿನ19 **:** ಆತ್ಮ ಸಂಬಂಧವಾದ ಸೇವೆಯು ಪ್ರಭಾವವುಳ್ಳದ್ದು.

2ನೇ ಕೋರಿಂಥ 3:7-9

ಆದರೆ ಮರಣದ ಸೇವೆಯು ಕಲ್ಲಿನ ಮೇಲೆ ಲಿಖಿತವಾದ ಅಕ್ಷರಗಳಲ್ಲಿದ್ದರೂ ಪ್ರಭಾವದಿಂದ ಕೂಡಿದ್ದಾಗಿತ್ತು; ಆ ಪ್ರಭಾವದಿಂದ ಮೋಶೆಯ ಮುಖಕ್ಕೆ ಬಂದ ಪ್ರಕಾಶವು ಕುಂದಿ ಹೋಗುವಂಥದ್ದಾಗಿದ್ದರೂ ಅದರ ನಿಮಿತ್ತ ಇಸ್ರಾಯೇಲ್ಯರು ಅವನ ಮುಖವನ್ನು ದೃಷ್ಟಿಸಿ ನೋಡಲಾರದೆ ಇದ್ದರು. ಹೀಗಿದ್ದ ಮೇಲೆ ಆತ್ಮ ಸಂಬಂಧವಾದ ಸೇವೆಯು ಎಷ್ಟೋ ಹೆಚ್ಚಾಗಿ ಪ್ರಭಾವದಿಂದಿರುವದಲ್ಲವೇ? ಅಪರಾಧ ನಿರ್ಣಯದ ಸೇವೆಯು ಪ್ರಭಾವದಿಂದಿರುವದಾದರೆ ನೀತಿಯ ಸೇವೆಯು ಎಷ್ಟೋ ಅಧಿಕವಾದ ಪ್ರಭಾವವುಳ್ಳದ್ದಾಗಿರಬೇಕು.

ಹಳೆಯ ಒಡಂಬಡಿಕೆಯು ಅಪರಾಧ ನಿರ್ಣಯ/ಖಂಡನೆಯ ಸೇವೆಯಾಗಿತ್ತು ಆದರೆ ಹೊಸ ಒಡಂಬಡಿಕೆಯು ನೀತಿಯ ಸೇವೆಯಾಗಿದೆ. ಇತರರ ಹೃದಯದ ವಿಷಯದಲ್ಲಿ ವ್ಯವಹರಿಸುವಾಗ, ನಾವು ನೀತಿಯ ಬಗ್ಗೆ ಕೇಂದ್ರೀಕರಿಸುತ್ತೇವೋ ಅಥವಾ ಖಂಡನೆ/ ಅಪರಾಧ ನಿರ್ಣಯದ ಬಗ್ಗೆ ಕೇಂದ್ರೀಕರಿಸುತ್ತೇವೋ?

ಮೋಶೆಯ ಮುಖಕ್ಕೆ ಬಂದ ಪ್ರಕಾಶವು ಕುಂದಿ ಹೋಗುವಂಥಹ ಪ್ರಭಾವವಾಗಿತ್ತು, ಆದರೆ ಹೊಸ ಒಡಂಬಡಿಕೆಯ ಪ್ರಭಾವವು ಕಳೆಗುಂದದೆ ಅಸ್ತಿತ್ವದಲ್ಲಿರುತ್ತದೆ.

ದೇವರು ನಮಗೆ ಕೊಟ್ಟಿರುವ ಅದ್ಭುತವಾದ ಸೇವೆಯನ್ನು ನಮ್ಮ ಸವಲತ್ತು ಎಂದು ಭಾವಿಸುತ್ತೇವೆಯೇ?

ಅನ್ವಯ

ಇನ್ನೊಬ್ಬ ಶಿಷ್ಯರೊಂದಿಗೆ ಕೂಡಿ ದೇವರು ನಮಗೆ ಕೊಟ್ಟಿರುವ ಅದ್ಭುತ ಸೇವೆಗಾಗಿ ದೇವರಿಗೆ ಧನ್ಯವಾದ ಹೇಳಿರಿ.

ಅನುವಾದ : ಕ್ಲೆರಿನ್ ಇವೆಂಜಲಿನ್ ಜೋರ್ಜ್

ದಿನ 20 **:** ಆತ್ಮನನ್ನು ಸಂಚಕಾರ/ಭದ್ರತಾ ಠೇವಣಿಯಾಗಿ ಅನುಗ್ರಹಿಸಲಾಗಿದೆ.

2ನೇ ಕೋರಿಂಥ 5:5-7

ಅದಕ್ಕಾಗಿಯೇ ನಮ್ಮನ್ನು ಸಿದ್ಧಮಾಡಿದ ದೇವರು ತಾನೇ ನಮಗೆ ಆತ್ಮನನ್ನು ಸಂಚಕಾರವಾಗಿ ಅನುಗ್ರಹಿಸಿದ್ದಾನೆ. ಹೀಗಿರುವದರಿಂದ ಶರೀರದ ಮನೆಯಲ್ಲಿರುವ ವರೆಗೂ ನಾವು ಕರ್ತನಿಗೆ ದೂರವಾಗಿದ್ದೇವೆಂದು ಬಲ್ಲವರಾಗಿ ನಾವು ಯಾವಾಗಲೂ ಭರವಸವುಳ್ಳವರಾಗಿದ್ದೇವೆ; ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವೆ.

ಮನೆ ಖರೀದಿಸಲು ಹಣ ಪಾವತಿಸುವ ಕಾರಣದಿಂದ ನೀವು ಯಾರಿಗಾದರೂ ಠೇವಣಿ ಹಣ ನೀಡಿದಾಗ, ಒಂದು ದಿನ ನೀವು ಸಂಪೂರ್ಣ ಮೊತ್ತವನ್ನು ಪಾವತಿಸಿ ಆ ಮನೆಯನ್ನು ಖರೀದಿಸುತ್ತೀರಿ ಎಂದು ಭಾಗಶಃ ಖಾತರಿ ನೀಡಿದಂತೆ.

ಬರಬೇಕಾದ ರಕ್ಷಣೆಯನ್ನು ಖಾತರಿಪಡಿಸುವಂತೆ ಠೇವಣಿಯಾಗಿ ದೇವರು ನಮಗೆ ಪವಿತ್ರಾತ್ಮನನ್ನು ಕೊಟ್ಟಿದ್ದಾನೆ. ಅದೇ ಸಮಯ, ಪರಲೋಕದಲ್ಲಿರುವ ನಮ್ಮ ನಿವಾಸಯನ್ನು ನಾವು ಧರಿಸಿಕೊಳ್ಳಬೇಕೆಂದು ಆಸಕ್ತಿಯಿಂದ ಅಪೇಕ್ಷಿಸುವವರಾಗಿ

ಇದರಲ್ಲಿ(ಶರೀರದಲ್ಲಿ) ನರಳುತ್ತೇವೆ. ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯಬೇಕು. ಒಂದು ಸ್ಥಳವು ನಮ್ಮ ತಂದೆಯ ಮನೆಯಲ್ಲಿ ನಮಗೆ ಸಿದ್ಧವಾಗಿದೆ.

ಅನ್ವಯ

ಪವಿತ್ರಾತ್ಮನಿಂದ ಬರುವ ನಂಬಿಕೆಯಿಂದ ಇಂದು ಏನಾದರೂ ವಿಭಿನ್ನವಾದದ್ದನ್ನು ಮಾಡಿ.

ಅನುವಾದ : ಕ್ಲೆರಿನ್ ಇವೆಂಜಲಿನ್ ಜೋರ್ಜ್

---

ದಿನ 21 **:** ಆತ್ಮನ ಸಹಾಯದಿಂದ ನಿಮ್ಮ ಗುರಿಯನ್ನು ಸಾಧಿಸಿ.

---

ಗಲಾತ್ಯದವರಿಗೆ 3:1-3

ಓ ಬುದ್ಧಿಯಿಲ್ಲದ ಗಲಾತ್ಯದವರೇ, ಸತ್ಯಕ್ಕೆ ವಿಧೇಯರಾಗದಂತೆ ನಿಮ್ಮನ್ನು ಯಾರು ಮರುಳುಗೊಳಿಸಿದರು? ಯೇಸು ಕ್ರಿಸ್ತನು ಶಿಲುಬೆಗೆ ಹಾಕಿಸಿಕೊಂಡವನಾಗಿ ನಿಮ್ಮ ಕಣ್ಣೆದುರಿನಲ್ಲಿ ಸ್ಪಷ್ಟವಾಗಿ ವರ್ಣಿಸಲ್ಪಟ್ಟನಲ್ಲವೇ? ಒಂದು ಸಂಗತಿಯನ್ನು ಮಾತ್ರ ನಿಮ್ಮಿಂದ ತಿಳುಕೊಳ್ಳಬೇಕೆಂದಿದ್ದೇನೆ. ನೀವು ಆತ್ಮನನ್ನು ಹೊಂದಿದ್ದು ನ್ಯಾಯಪ್ರಮಾಣದ ಕ್ರಿಯೆಗಳಿಂದಲೋ? ಇಲ್ಲವೆ ಕೇಳಿ ನಂಬಿದ್ದ ರಿಂದಲೋ? ನೀವು ಇಷ್ಟು ಬುದ್ಧಿಯಿಲ್ಲ ದವರಾಗಿದ್ದೀರಾ? ಆತ್ಮನಿಗನುಸಾರವಾಗಿ ಪ್ರಾರಂಭಿಸಿ ಈಗ ಶಾರೀರಿಕ ರೀತಿಯಲ್ಲಿ ಪರಿಪೂರ್ಣರಾಗಬೇಕೆಂದಿದ್ದೀರಾ?

ಪವಿತ್ರಾತ್ಮನು ನ್ಯಾಯಪ್ರಮಾಣದ ಕ್ರಿಯೆಗಳ ಮೂಲಕ ಗಳಿಸಿದ ಉಡುಗೊರೆಯಾಗಿಲ್ಲ. ನಾವು ಎಲ್ಲಾ ಸರಳ ನಂಬಿಕೆ ಮೂಲಕ ಪವಿತ್ರಾತ್ಮನನ್ನು ಪಡೆದೆವು. ನಿರಂತರವಾದ ಸರಳ ನಂಬಿಕೆ ಮತ್ತು ಯೇಸುವನ್ನು ಪಾಲಿಸುವ ಬದಲು, ಶರೀರಿಕ ರೀತಿಯ ಕ್ರೀಯೆಯಿಂದ ಸಾಧಿಸಬಹುದು ಎಂಬ ವಂಚನೆಗೆ ಗಲಾತ್ಯದವರು ಒಳಗಾಗಿದ್ದರು.

ನಾವು ಆತ್ಮನಿಗನುಸಾರವಾಗಿ ಪ್ರಾರಂಭಿಸಿ ಈಗ ಶಾರೀರಿಕ ರೀತಿಯಲ್ಲಿ ಪರಿಪೂರ್ಣರಾಗಲು ಪ್ರಯತ್ನಿಸುತ್ತಿದ್ದೇವಾ?

ಅನ್ವಯ

ನಿಮ್ಮ ಜೀವನದಲ್ಲಿ ಯಾವ ವಿಷಯದಲ್ಲಿ ನೀವು ನಂಬಿಕೆಯನ್ನು ಕ್ರೀಯೆ ಮೇಲೆ ಇರಿಸಿಕೊಂಡಿದ್ದೀರಿ ಎಂದು ಪರಿಶೀಲಿಸಿ ಮತ್ತು ಅದನ್ನು ಸರಿಪಡಿಸಿ. ನಿಮ್ಮ ಹೊಸ ವರ್ಷದ ನಿರ್ಣಯಗಳು ಮತ್ತು ಗುರಿಗಳನ್ನು ನೋಡಿ ಮತ್ತು ನೀವು ಆರಂಭದಲ್ಲಿ ಯೋಜಿಸಿರುವುದರ ಪ್ರಕಾರ ನೀವು ಪ್ರಗತಿಯನ್ನು ಮಾಡುತ್ತಿದ್ದೀರಾ ಎಂದು ನೋಡಿರಿ? ನಂಬಿಕೆಯ ಮೂಲಕ ದೇವರ ಶಕ್ತಿಯಿಂದ ನೀವು ಯೋಜಿಸಿದದ್ದಕ್ಕಿಂತಲೂ ಹೆಚ್ಚನ್ನು ಸಾಧಿಸಲು ಪವಿತ್ರಾತ್ಮನ ಸಹಾಯವನ್ನು ಅರಸಿ ಮುಂದುವರಿಸಿ.

ಅನುವಾದ : ಕ್ಲೆರಿನ್ ಇವೆಂಜಲಿನ್ ಜೋರ್ಜ್

---

ದಿನ 22 **:** ಅಪ್ಪಾ, ತಂದೆಯೇ ಎಂದು ಕೂಗುವ ಆತ್ಮ

---

ಗಲಾತ್ಯದವರಿಗೆ 4: 6 -9

6 ನೀವು ಪುತ್ರ ರಾಗಿರುವದರಿಂದ--ಅಪ್ಪಾ, ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ದೇವರು ನಿಮ
ಹೃದಯಗಳಲ್ಲಿ ಕಳುಹಿಸಿಕೊಟ್ಟನು. 7 ಹೀಗಿರುವಲ್ಲಿ ಇನ್ನು ನೀನು ದಾಸನಲ್ಲ, ಮಗನಾಗಿದ್ದೀ; ಮಗನೆಂದ ಮೇಲೆ ಕ್ರಿಸ್ತನ
ಮೂಲಕ ದೇವರಿಗೆ ಬಾಧ್ಯನೂ ಆಗಿದ್ದೀ. 8 ಪೂರ್ವಕಾಲದಲ್ಲಿ ನೀವು ದೇವರನ್ನರಿಯದವರಾಗಿ ಸ್ವಾಭಾವಿಕವಾಗಿ

ದೇವರಲ್ಲದವುಗಳನ್ನು ಸೇವಿಸಿದಿರಿ. ೯ ಈಗಲಾದರೋ ನೀವು ದೇವರನ್ನು ತಿಳುಕೊಂಡಿ ದ್ದೀರಿ; ಸರಿಯಾಗಿ ಹೇಳಬೇಕಾದರೆ ದೇವರು ನಿಮ್ಮನ್ನು ತಿಳುಕೊಂಡಿದ್ದಾನೆ; ಹೀಗಿರಲಾಗಿ ನೀವು ಬಲಹೀನವಾದ ದರಿದ್ರ ಮೂಲ ಪಾಠಗಳಿಗೆ ಮತ್ತೂ ಅಧೀನರಾಗ ಬೇಕೆಂದು ಅಪೇಕ್ಷಿಸಿ ಪುನಃ ಅವುಗಳಿಗೆ ನೀವು ತಿರುಗಿಕೊಳ್ಳುವದು ಹೇಗೆ?

ನೀವು ಪುತ್ರರಾಗಿರುವುದರಿಂದ "ಅಪ್ಪಾ ,ತಂದೆಯೇ" ಎಂದು ಹೃದಯಗಳಲ್ಲಿ ಕರೆಯುವ ಆತ್ಮವನ್ನು ಕಳುಹಿಸಿದ್ದಾನೆ. ಹೀಗಿರುವಲ್ಲಿ ಇನ್ನು ನೀನು ದಾಸನಲ್ಲ ಮಗನಾಗಿದ್ದೀ, ಮಗನೆಂದ ಮೇಲೆ ದೇವರ ಮೂಲಕ ಬಾಧ್ಯನೂ ಆಗಿದ್ದೀ.ನಂಬಿದವರು ಧರ್ಮಶಾಸ್ತ್ರಕ್ಕೆ ಆಳಲ್ಲ. ಮುಂಚೆ ನೀವು ದೇವರನ್ನು ಅರಿಯದವರು ಆಗಿದ್ದಾಗ ಸ್ವಾಭಾವಿಕವಾಗಿ ದೇವರಲ್ಲದವುಗಳಿಗೆ ಗುಲಾಮರಾಗಿದ್ದಿರಿ. ಈಗಲಾದರೂ ನೀವು ದೇವರನ್ನು ಅರಿತುಕೊಂಡಿದ್ದರಿಂದ ನಿಜವಾಗಿ ಹೇಳಬೇಕಾದರೆ ದೇವರು ನಿಮ್ಮನ್ನು ಅರಿತುಕೊಂಡಿದ್ದಾನೆ. ಹೀಗಿರಲಾಗಿ ನೀವು ಬಲಹೀನವಾದ ದರಿದ್ರ ನಿಯಮಗಳಿಗೆ ಪುನಃ ಗುಲಮರಾಗಬೇಕೆಂದು ಅಪೇಕ್ಷಿಸಿ ಅವುಗಳಿಗೆ ಇರುವ ಕೊಳ್ಳುವುದು ಹೇಗೆ?

ನೀವು ಒಬ್ಬ ಮಹಾರಾಜನ ಅಥವಾ ರಾಷ್ಟ್ರಪತಿಯ ಮಗನೆಂದು ಊಹಿಸಿಕೊಳ್ಳಿ ನಿಮ್ಮ ಜೀವನವೂ ಬೇರೆಯವರಿಗಿಂತ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ ನೀವು ಇಂತಹ ಮಹಾರಾಜನ ಮಗನಾಗಿರುವ ಸಂದರ್ಭದಲ್ಲಿ ನಿಮ್ಮಲ್ಲಿರುವ ಕೆಲವು ಕನಸುಗಳು ಯಾವುವು?

ನಾವು ದೇವರ ಮಕ್ಕಳಾಆಗಿದ್ದೇವೆ ನಾವು ಇನ್ನು ಮುಂದೆ ದಾಸರಲ್ಲ.ಮಗನಾಗಿರುವುದರಿಂದ ದೇವರ ರಾಜ್ಯ ಗೋಸ್ಕರ ನಮ್ಮಲ್ಲಿರುವ ಕನಸುಗಳನ್ನು?ದೇವರು ನಮ್ಮನ್ನು ತನ್ನ ಮಗ ಮತ್ತು ಮಗಳು ಎಂದುಕರೆಯುವುದು ಎಂತ ಅದೃಷ್ಟ ಭಾಗ್ಯವಲ್ಲವೇ?ಅಥವಾ ಯಾರಾದರೂ ಇಂತಹ ದರಿದ್ರ ನಿಯಮಗಳಿಗೆ/ ನಿಶ್ಚಿತಾಭಿಪ್ರಾಯಗಳಿಗೆ ಗುಲಾಮರಾಗಿ ಇದ್ದೀರಾ?

ಅನ್ವಯ

ನೀವು ಅಡಿದಾರಿ ಹಿಡಿಯಲು ಪ್ರೇರೇಪಿಸುವ ಕೆಲವು ಬಲಹೀನ ಮತ್ತು ದರಿದ್ರ ನಿಯಮಗಳನ್ನು ಪಟ್ಟಿ ಮಾಡಿ ಮತ್ತುನಮ್ಮಿಂದ ಅವುಗಳನ್ನು ನಿರಾಕರಿಸಲು ದೇವರಲ್ಲಿ ಪ್ರಾರ್ಥಿಸಿರಿ ನಿಮಗೆ ಸಹಾಯ ಮಾಡಬಲ್ಲ ಯಾರಾದರೂ ಒಬ್ಬರೊಂದಿಗೆ ನಿಮ್ಮ ಸಮಸ್ಯೆಯನ್ನು ಚರ್ಚಿಸಿರಿ ವಚನಗಳ ಮೂಲಕ ಅವುಗಳನ್ನೆಲ್ಲಬುಡಸಹಿತ ಕಿತ್ತುಹಾಕಿ.

ಅನುವಾದ: ಫ್ಲಾವಿಯಾ

---

ದಿನ 23 **:** ಆತ್ಮನನ್ನು ಅನುಸರಿಸಿನಡೆದುಕೊಳ್ಳಿರಿ

---

ಗಲಾತ್ಯದವರಿಗೆ 5:16 -17

16 ನಾನು ಹೇಳುವದೇನಂದರೆ, ಆತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ; ಆಗ ನೀವು ಶರೀರಭಾವದ ಅಭಿಲಾಷೆಯನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವದಿಲ್ಲ.17 ಶರೀರದಾಶೆಯು ಆತ್ಮನಿಗೆ ವಿರುದ್ಧ ವಾಗಿದೆ. ಆತ್ಮನು ಶರೀರಕ್ಕೆ ವಿರುದ್ಧವಾಗಿದ್ದಾನೆ. ನೀವು ಮಾಡಲಿಚ್ಛಿಸುವದನ್ನು ಮಾಡದಂತೆ ಇವು ಒಂದ ಕ್ಕೊಂದು ವಿರೋಧವಾಗಿವೆ.

ನಾನು ಹೇಳುವುದೇನೆಂದರೆ ಆತ್ಮನಲ್ಲಿ ನಡೆಯಿರಿ ಆಗ ನೀವು ದೈಹಿಕ ಆಸೆಯನ್ನು ಪೂರೈಸಲಾರಿರಿ.ಏಕೆಂದರೆ ಶರೀರಭಾವವು ಆತ್ಮನಿಗೆ ವಿರುದ್ಧವಾಗಿಯೂ ,ಆತ್ಮನೋ ಶರೀರ ಭಾವಕ್ಕೆ ವಿರುದ್ಧವಾಗಿಯೂ ಆಶಿಸುತ್ತದೆ.ನೀವು ಮಾಡ ಬಯಸುವದನ್ನು ಮಾಡದಂತೆ ಇವುಒಂದಕ್ಕೊಂದು ವಿರುದ್ಧವಾಗಿವೆ.

ನಾವು ಆತ್ಮನಿಂದ ನಡೆಸಲ್ಪಟ್ಟ ರೆ ಶರೀರ ಭಾವದ ನೀಚ ಆಸೆಗಳನ್ನು ಎಂದು ಪೂರೈಸಲಾರೆವು. ಆತ್ಮನು ನಮ್ಮೊಡನೆ ಎಂದೆಂದಿಗೂ ಇರುವನು.

ನಿಮ್ಮತಂದೆನಿಮ್ಮೊಡನೆಯಾವಾಗಲೂಇದ್ದಾಗನೀವುಯಾವುದಾದರೂಪಾಪಮಾಡಲುಹವಣಿಸಿದಿರೇಂದುಊಹಿಸಿಕೊಳ್ಳಿ ಆಗ ನಿಮ್ಮ ತಂದೆ ಅದಕ್ಕೆ ಖಂಡಿತ ಅವಕಾಶ ಕೊಡುವುದಿಲ್ಲ ಬೇರೆ ಮಾತಿನಲ್ಲಿ ಹೇಳಬೇಕೆಂದರೆ ನೀವೆಂದು ಪಾಪ ಮಾಡಲು ನಿರ್ಧರಿಸಿದರೆ ನೀವು ನಿಮ್ಮ ತಂದೆಯ ಪಕ್ಕಕ್ಕೆ ಸರಿಸಿ ಆ ಪಾಪವನ್ನು ಮಾಡಬೇಕು.ಆತ್ಮನನ್ನು ಪಕ್ಕಕ್ಕೆ ಸರಿಸಿ,ನಮ್ಮ ಶರೀರ ಭಾವದ ನೀಚ ಆಸೆಗಳನ್ನು ಪೂರೈಸದಂತೆ ನಾವು ನಮ್ಮೆಲ್ಲ ಬಲದಿಂದ ಪ್ರಯತ್ನಿಸೋಣ.

<u>ಅನ್ವಯ</u>
ನಿಮ್ಮಲ್ಲಿರುವ ಶರೀರ ಭಾವದ ನೀಚ ಆಸೆಗಳನ್ನು ಗುರುತಿಸಿಕೊಳ್ಳಿ ಮತ್ತು ಅವುಗಳಿಂದ ಬಿಡುಗಡೆ ಹೊಂದಲು ಪ್ರಾರ್ಥಿಸಿ ಪವಿತ್ರ ಆತ್ಮನಿಗೆ ಬಹಳ ಗಮನವಿಟ್ಟು ಕಿವಿಗೊಡಿ ಆತನ ಮಾರ್ಗಗಳನ್ನು ಪಾಲಿಸಿ ನಿಮಗೆ ಶೋಧನೆ ಉಂಟಾದಾಗ ಅವನಿಗೆ ಶರಣನಾಗಿ ಆನಂದಿಸಿ.

ಅನುವಾದ: ಫ್ಲಾವಿಯಾ

---

ದಿನ 24 **:** ಪವಿತ್ರಾತ್ಮನ ಫಲ

---

<u>ಗಲಾತ್ಯದವರಿಗೆ 5:22-25</u>
22 ಆದರೆ ಆತ್ಮನ ಫಲವೇನಂದರೆ--ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ವಿನಯ ಸದ್ಗುಣ ನಂಬಿಕೆ 23 ಸಾತ್ವಿಕತ್ವ ಮಿತವ್ಯಯ ಇಂಥ ವುಗಳೇ; ಇಂಥವುಗಳಿಗೆ ವಿರೋಧವಾಗಿ ನ್ಯಾಯ ಪ್ರಮಾಣವಿಲ್ಲ. 24 ಕ್ರಿಸ್ತನವರು ತಮ್ಮ ಶರೀರವನ್ನು ಅದರ ಇಚ್ಛೆ ದುರಾಶೆ ಸಹಿತವಾಗಿ ಶಿಲುಬೆಗೆ ಹಾಕಿದ್ದಾರೆ. 25 ನಾವು ಆತ್ಮನಲ್ಲಿ ಜೀವಿಸುವದಾದರೆ ನಾವು ಸಹ ಆತ್ಮನಲ್ಲಿ ನಡೆಯೋಣ.

ನಮ್ಮಲ್ಲಿ ಆತ್ಮನ ಫಲವಿದೆಯೇ?ಆ ಫಲವನ್ನು ಉಂಟುಮಾಡುವುದು ಯಾರು?ನಮ್ಮಿಂದ ಆ ಫಲವನ್ನು ಉಂಟು ಮಾಡಲು ಸಾಧ್ಯವಿಲ್ಲ ಎಂಬುದು ನಿಮಗೆ ತಿಳಿದಿದೆಯೇ?ನಾವು ಮಾಡಬೇಕಾದದ್ದು ಏನಂದರೆ ಪವಿತ್ರ ಆತ್ಮನನ್ನು ನಮ್ಮಲ್ಲಿ ವೃದ್ಧಿ ಹೊಂದಲು ಅವಕಾಶ ಕೊಟ್ಟು ನಮ್ಮ ಹೃದಯದಲ್ಲಿ, ಮನಸ್ಸಿನಲ್ಲಿ ಮತ್ತು ಜೀವನದಲ್ಲಿ ಅನುಮತಿ ಕೊಡಬೇಕು ಹೇಗೆಂದರೆ ಪವಿತ್ರಾತ್ಮನು ನಮ್ಮನ್ನು ನಡೆಸುವವನಿಗೆ ಅಡ್ಡಿಮಾಡಬಾರದು ಶರೀರಭಾವದ ಆಸೆಗಳನ್ನು ನಾವು ನಿರಾಕರಿಸಬೇಕು (ಒಂದು ಒಳ್ಳೆಯ ಮರ ಬೆಳೆದು ತುಂಬಾ ಫಲ ಕೊಡಬೇಕಾದರೆ ನಾವು ಎಲ್ಲಾ ಮುಳ್ಳುಗಿಡ ,ಕಳೆ-ಕಂಟಿಗಳನ್ನುನಮ್ಮತೋಟದಿಂದ ತೆಗೆಯಬೇಕು)ನಾವು ನಮಗೋಸ್ಕರ ಜೀವಿಸದೆ ಕ್ರಿಸ್ತನಿಗೋಸ್ಕರ ಜೀವಿಸೋಣ ಆಗ ಆತ್ಮನು ಫಲ ಉಂಟುಮಾಡುವನು.

ಒಬ್ಬ ಆತ್ಮಿಕ ಮನುಷ್ಯನಲ್ಲಿ ಎಲ್ಲಾ ಒಳ್ಳೆಯ ಗುಣಗಳು ಅವನ ಜೀವನದಲ್ಲಿ ತುಂಬಿರುತ್ತವೆ. ನಾವು ನಮ್ಮೆಲ್ಲರ ಶರೀರಭಾವದ ಆಸೆ ಮತ್ತು ಅಪೇಕ್ಷೆಗಳನ್ನು ಶಿಲುಬೆಗೆ ಹಾಕಿದರೆ ಮಾತ್ರ ಆ ಗುಣಗಳು ನಮ್ಮಲ್ಲಿ ಕಾಣಿಸುತ್ತವೆ. ನಮ್ಮೆಲ್ಲರ ಶರೀರ ಭಾವದ ಆಸೆ ಮತ್ತು ಅಪೇಕ್ಷೆಗಳನ್ನು ಶಿಲುಬೆಗೆ ಹಾಕಲು/ ನಿರಾಕರಿಸಲು ನಮ್ಮಿಂದಾದಷ್ಟು ಪ್ರಯತ್ನಿಸೋಣ.

ಅನ್ವಯ

ನಿಮ್ಮಲ್ಲಿ ಈಗಲೂ ಇರುವ ಶರೀರ ಭಾವದ ಫಲಗಳನ್ನು ಪಟ್ಟಿ ಮಾಡಿ ಮತ್ತು ಅವುಗಳನ್ನು ತ್ಯಜಿಸಲು ಪ್ರಾರ್ಥನೆಯಿಂದ ಸ್ಪಷ್ಟವಾಗಿ ಯೋಜನೆ ರೂಪಿಸಿ ಪವಿತ್ರಾತ್ಮನು ನಿಮ್ಮಲ್ಲಿ ಪ್ರತಿದಿನ ಹೆಚ್ಚುಹೆಚ್ಚಾಗಿ ಫಲ ಉಂಟು ಮಾಡುವುದನ್ನು ಕಾಣುವಿರಿ ಮತ್ತು ಆನಂದಿಸುವಿರಿ

ಅನುವಾದ: ಫ್ಲಾವಿಯಾ

---

ದಿನ 25 **:** ಪವಿತ್ರಾತ್ಮನೇ ಮುದ್ರೆಯು

---

ಎಫೆಸದವರಿಗೆ 1:13-14

13 ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯ ವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ. 14 ಆತನ ಮಹಿಮೆಯ ಸ್ತುತಿಗೋಸ್ಕರ ಕೊಂಡುಕೊಂಡ ಸ್ವಾಸ್ಥ್ಯದವರಿಗೆ ವಿಮೋಚನೆಯಾ ಗುವ ತನಕ ಆತನು (ಪವಿತ್ರಾತ್ಮನು) ನಮ್ಮ ಬಾಧ್ಯತೆಗೆ ಸಂಚಕಾರನಾಗಿದ್ದಾನೆ.

ಸಮಂಜಸವಾದ ಮುದ್ರೆ (ಅಥವಾ ಸ್ಟ್ಯಾಂಪ್) ಇಲ್ಲದ ಪ್ರಮಾಣಪತ್ರವು ಅಧಿಕೃತವಲ್ಲ ಮತ್ತು ಸ್ವೀಕಾರಾರ್ಹವಲ್ಲ ಎಂದು ನಮಗೆ ತಿಳಿದಿದೆ.

ನಾವು ಸುವಾರ್ತೆ ಕೇಳಿದಾಗ, ಕ್ರಿಸ್ತನಲ್ಲಿ ಸೇರಿಸಲ್ಪಟ್ಟೆವು. ನಾವು ನಂಬಿದಾಗ, ಪಶ್ಚಾತ್ತಾಪ ಪಟ್ಟು ದೀಕ್ಷಾಸ್ನಾನ ಪಡೆದಾಗ, ನಮಗೆ ಈ ಪವಿತ್ರಾತ್ಮನನ್ನು ಮುದ್ರೆಯಾಗಿ ನೀಡಲಾಯಿತು.

ನೀವು ನನ್ನವರೆಂದು ಎಂದು ಕರೆಸಲ್ಪಟ್ಟು ದೇವರಿಂದ ಪ್ರಮಾಣಪತ್ರವನ್ನು ಪಡೆಯುವುದು ಎಷ್ಟೋ ವಿಶೇಷ ಅಲ್ಲವೇ? ನಮ್ಮ ಹೆಸರುಗಳು ಜೀವನದ ಪುಸ್ತಕದಲ್ಲಿ ಬರೆಯಲ್ಪಟ್ಟಿವೆ ಎಂದು ನಮಗೆ ತಿಳಿದಿರುವ ವಿಷಯ ಎಷ್ಟೋ ಸವಲತ್ತು ಅಲ್ಲವೇ?

ಅನ್ವಯ

ನಿಮ್ಮನ್ನು ಆಹ್ವಾನಿಸಿದ ಮತ್ತು ಸತ್ಯವೇದ ಕಲಿಸಿದ ಶಿಷ್ಯರನ್ನು ನೆನಪಿನಲ್ಲಿಡಿ. ಅವರಿಗೋಸ್ಕರ ಪ್ರಾರ್ಥಿಸಿ ಮತ್ತು ಅವರಿಗೆ ಉತ್ತೇಜಿಸುವ ಸಲುವಾಗಿ ಕೃತಜ್ಞತಾ ಪತ್ರ ಕಳುಹಿಸಿ. ನಿಮ್ಮಲ್ಲಿರುವ ಸ್ವೀಕಾರದ ಮುದ್ರೆಯಾದ ಪವಿತ್ರ ಆತ್ಮ ನಿಗಾಗಿ ದೇವರಿಗೆ ಧನ್ಯವಾದವನ್ನು ಸಲ್ಲಿಸಿ.

ಅನುವಾದ: ವಿಜಯ್ ಕಿರಣ್

---

ದಿನ 26 **:** ಪವಿತ್ರಾತ್ಮನಿಂದಾಗುವ ಐಕ್ಯತೆಯನ್ನು ಕಾಪಾಡಿಕೊಳ್ಳಿ

---

ಎಫೆಸದವರಿಗೆ 4 :1 -3

1 ಆದದರಿಂದ ನೀವು ಕರೆಯಲ್ಪಟ್ಟ ಕರೆಯುವಿಕೆಗೆ ಯೋಗ್ಯರಾಗಿ ನಡೆದುಕೊಳ್ಳ ಬೇಕೆಂದು ಕರ್ತನ ಸೆರೆಯವನಾದ ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ. 2 ನೀವು ಪೂರ್ಣ ವಿನಯ ಸಾತ್ವಿಕತ್ವ ಗಳಿಂದಲೂ ದೀರ್ಘಶಾಂತಿಯಿಂದಲೂ ಕೂಡಿದವ ರಾಗಿ ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ. 3 ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು ಪವಿತ್ರಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿ ಕೊಳ್ಳುವದಕ್ಕೆ ಆಸಕ್ತರಾಗಿರ್ರಿ.

ಪ್ರತಿಯೊಂದು ಗುಂಪು / ತಂಡ / ಸಭೆ, ಇವುಗಳಲ್ಲಿ ಐಕ್ಯತೆ ಒಂದು ದೊಡ್ಡ ವಿಷಯ. ಐಕ್ಯವನ್ನು ಅಡಚಣೆ ಮಾಡುವುದು ಸೈತಾನನು ತನ್ನ ಯೋಜನೆಗಳನ್ನು ಪೂರೈಸಲು ಬಳಸುವ ಒಂದು ಪ್ರಮುಖ ಸಾಧನವಾಗಿದೆ.

ನಾವು ಕುಟುಂಬವಾಗಿ, ಕುಟುಂಬ ಸಭೆಯಾಗಿ... ಒಗ್ಗಟ್ಟಾಗಿದ್ದೇವಾ? ಇಲ್ಲದಿದ್ದರೆ, ಒಂದಾಗಿರಲು ಏನಾದರೂ ಪ್ರಯತ್ನಿಸಲು ಇದುವೇ ಸಮಯ. ಇದನ್ನು ಆದ್ಯತೆಯಾಗಿ ಇರಿಸಿ; ಸ್ವಲ್ಪ ವಿಳಂಬ ಹೆಚ್ಚು ಹಾನಿ ಮಾಡುತ್ತದೆ.

ಒಗ್ಗಟ್ಟಾಗಿರಲು, ನಾವು ಸಂಪೂರ್ಣವಾಗಿ ವಿನಮ್ರತೇ ಮತ್ತು ತಗ್ಗಿದ ಮನೋಭಾವ, ಪರಸ್ಪರ ಶಾಂತಿ ಮತ್ತು ಪ್ರೀತಿಯಿಂದ ಒಬ್ಬರನೊಬ್ಬರು ಸಹಿಸಿ ಕೊಳ್ಳುವುದು ಅಗತ್ಯ.

ಅನ್ವಯ

ನಿಮ್ಮ ಅನ್ಯೋನತೆಯಲ್ಲಿ ಮತ್ತು ಕುಟುಂಬದಲ್ಲಿ, ಐಕ್ಯತೆಯನ್ನು ಕಟ್ಟಲು, ನೀವು ಯಾವ ರೀತಿಯಲ್ಲಿ ನಮ್ರತೆಯಲ್ಲಿ ಬೆಳೆಯಬಹುದೆಂದು ಮಾರ್ಗದರ್ಶನಕ್ಕಾಗಿ ಪವಿತ್ರ ಆತ್ಮನಲ್ಲಿ ಪ್ರಾರ್ಥಿಸಿ. ಒಗ್ಗಟ್ಟನ್ನು ಹೀನಗೊಳಿಸುವ ಹೆಮ್ಮೆ ಎಂಬ ಪಾಪದ ಯಾವುದೇ ವಿಷಯ ನಿಮ್ಮಲ್ಲಿದ್ದರೆ ಅದನ್ನು ಅರಿಕೆ ಮಾಡಿಕೊಳ್ಳಿ. ಮತ್ತು ಪಶ್ಚಾತ್ತಾಪ ಹೊಂದಿ ಶಾಂತಿಯ ಬಂಧವನ್ನು ನಿರ್ಮಿಸಿ.

ಅನುವಾದ: ವಿಜಯ್ ಕಿರಣ್

---

ದಿನ 27 **:** ಆತ್ಮನು ಒಬ್ಬನೇ

---

ಎಫೆಸದವರಿಗೆ 4 :4 -7

4 ನಿಮ್ಮ ಕರೆಯುವಿಕೆಯ ಒಂದೇ ನಿರೀಕ್ಷೆಯಲ್ಲಿ ನೀವು ಕರೆಯಲ್ಪಟ್ಟಂತೆಯೇ ದೇಹವು ಒಂದೇ, ಆತ್ಮನು ಒಬ್ಬನೇ,
5 ಒಬ್ಬನೇ ಕರ್ತನು, ಒಂದೇ ನಂಬಿಕೆ, ಒಂದೇ ಬಾಪ್ತಿಸ್ಮ. 6 ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ; ಆತನು ಎಲ್ಲರ
ಮೇಲೆಯೂ ಎಲ್ಲರ ಮುಖಾಂತರವೂ ಎಲ್ಲರಲ್ಲಿಯೂ ಇರುವಾತನಾಗಿದ್ದಾನೆ. 7 ಆದರೆ ಕ್ರಿಸ್ತನು ಅನುಗ್ರಹಿಸಿದ ದಾನದ ಅಳತೆ
ಗನುಸಾರವಾಗಿ ನಮ್ಮಲ್ಲಿ ಪ್ರತಿಯೊಬ್ಬನಿಗೆ ಕೃಪೆಯು ಕೊಡಲ್ಪಟ್ಟಿತು.

ಕ್ರಿಸ್ತನಿಂದ ಕೃಪೆಯನ್ನು ಪಡೆಯುವುದು ಒಂದು ಸವಲತ್ತು. ಅವರು ಅದನ್ನು ಅಳತೆಗನುಸಾರವಾಗಿ ಹಂಚಿಕೊಂಡಿದ್ದಾರೆ. ನಾವೆಲ್ಲರೂ ಒಂದೇ ಭರವಸೆಗೆ ಕರೆಯಲ್ಪಟ್ಟವರು. ದೇವರು ಎಲ್ಲರ ಮೇಲೆಯೂ ಎಲ್ಲರ ಮುಖಾಂತರವೂ ಎಲ್ಲರಲ್ಲಿಯೂ ಇರುವಾತನಾಗಿದ್ದಾನೆ. ನಮಗಿರುವುದು ಒಂದೇ ದೇಹ ಮತ್ತು ಒಂದೇ ಆತ್ಮ.

ನಾವು ಎಲ್ಲದರಲ್ಲೂ ದೇವರನ್ನು ನೋಡುತ್ತೇವೆಯೇ? ನಾವು ಒಂದೇ ಕರ್ತನು, ಒಂದೇ ನಂಬಿಕೆ, ಒಂದೇ ದೀಕ್ಷಾಸ್ನಾನ, ಒಬ್ಬರೇ ದೇವರು ಎಂದು ಒಪ್ಪುತ್ತೇವೆಯೇ? ಈ ದೇವರ ಯೋಜನೆಯೊಂದಿಗೆ ನಾವೆಲ್ಲರೂ ಒಟ್ಟಾಗಿದ್ದೇವೆಂಬುದು ಜನರು ನೋಡಬಲ್ಲರಾ?

ಅಥವಾ ನನ್ನ ಮಾರ್ಗ, ನನ್ನ ಯೋಜನೆಗಳು, ನನ್ನ ಆಲೋಚನೆಗಳು, ದೇವರೊಂದಿಗೆ ನನ್ನ ಸಂಬಂಧ, ನನ್ನ ತಿಳುವಳಿಕೆಯು....ಹೀಗೆ ನಮ್ದೇ ಒಂತರ ದಾರಿ ಅಂತ ಜೀವಿಸುತ್ತಿದ್ದೇವಾ?

ಅನ್ವಯ

ಆತನ ಕೃಪೆ ಮತ್ತು ಆತನ ಕರೆಗಾಗಿ ದೇವರಿಗೆ ಧನ್ಯವಾದ ಸಲ್ಲಿಸಿ. ನೀವು ಕರೆಯಲ್ಪಟ್ಟ ಸಮಯದ ವಿಷಯವಾಗಿ ಮತ್ತು ದೇವರನ್ನು ಅನುಸರಿಸಲು ನೀವು ಮಾಡಿದ ಎಲ್ಲಾ ನಿರ್ಧಾರಗಳನ್ನು ನೆನಪಿಸಿಕೊಳ್ಳಿ ಮತ್ತು ಪ್ರಾರ್ಥಿಸಿ. ಎಲ್ಲರನ್ನು ಸಮನಾಗಿ ಗೌರವಿಸಿರಿ ಮತ್ತು ಸಮನಾಗಿ ಪ್ರೀತಿಸಿರಿ.

ಅನುವಾದ: ವಿಜಯ್ ಕಿರಣ್

---

ದಿನ 28 **:** ದೇವರ ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ

---

ಎಫೆಸದವರಿಗೆ 4:29-31

29 ನಿಮ್ಮ ಬಾಯೊಳಗಿಂದ ಯಾವ ಕೆಟ್ಟ ಮಾತೂ ಹೊರಡಬಾರದು; ಆದರೆ ಭಕ್ತಿಯನ್ನು ವೃದ್ಧಿ ಮಾಡುವಂಥ ಒಳ್ಳೆಮಾತು ಇದ್ದರೆ ಕೇಳುವವರ ಹಿತ ಕ್ಕಾಗಿ ಅದನ್ನು ಆಡಿರಿ. 30 ದೇವರ ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೀರಲ್ಲಾ. 31 ಎಲ್ಲಾ ದ್ವೇಷ, ಕೋಪ, ಕ್ರೋಧ, ಕಲಹ, ದೂಷಣೆ ಇವುಗಳನ್ನೂ ಸಕಲ ವಿಧವಾದ ದುಷ್ಟತನವನ್ನೂ ನಿಮ್ಮಿಂದ ದೂರ ಮಾಡಿರಿ.

ಆದಿಕಾಂಡ6:5-6 5 ಮನುಷ್ಯನ ದುಷ್ಟತ್ವವು ಭೂಮಿಯಲ್ಲಿ ಹೆಚ್ಚಿದ್ದನ್ನೂ ಅವನ ಹೃದಯದ ಆಲೋಚನೆಗಳ ಕಲ್ಪನೆಗಳೆಲ್ಲಾ ಯಾವಾಗಲೂ ಬರೀ ಕೆಟ್ಟವುಗಳೆಂದೂ ದೇವರು ನೋಡಿದನು. 6ಕರ್ತನು ಭೂಮಿಯ ಮೇಲೆ ಮನುಷ್ಯನನ್ನು ಉಂಟುಮಾಡಿದ್ದಕ್ಕೋಸ್ಕರ ಪಶ್ಚಾತ್ತಾಪ ಪಟ್ಟು ತನ್ನ ಹೃದಯದಲ್ಲಿ ನೊಂದುಕೊಂಡನು.

ಪವಿತ್ರತೆಯನ್ನು ನಿರ್ಲಕ್ಷಿಸಿ ನಾವು ಪವಿತ್ರಾತ್ಮನನ್ನು ದುಖಿ ಸಬಹುದು ಅಥವಾ ಬೌದ್ಧಿಕ ವಿಷಯಗಳ ಮೇಲೆ ಅವಲಂಬಿತವಾಗಿ. ನಾವು ಪ್ರಾರ್ಥನೆ ಮಾಡದೆ ಕಾರ್ಯ ನಿರತರಾಗಿದ್ದಾಗ ಪವಿತ್ರ ಆತ್ಮನನ್ನು ದುಃಖಿಸುತ್ತೇವ.ನಮ್ಮ ನಡೆ ಮತ್ತು ನಮ್ಮ ನುಡಿ ಇತರರ ಅಗತ್ಯಕ್ಕನುಸಾರವಾಗಿ ಬೆಳೆಸಲು ನಾವು ಸಹಾಯಕವಾಗಿದೇವಾ?

ಅನ್ವಯ

ಪ್ರಾರ್ಥನಾ ಸಹಿತ ನಿಮ್ಮ ಸಂಭಾಷಣೆಯನ್ನು ಕುರಿತು ನೆರೆಯವರನ್ನು ಕೇಳಿ.ನೋಡಿಕೊಳ್ಳಿ ನಿಮ್ಮ ಮಾತುಗಳು ಬೇರೆಯವರನ್ನು ಉತ್ತೇಜನ ಪಡಿಸುತ್ತಿದೇಯೇಅಥವಾ ನೋವನ್ನು ಉಂಟು ಮಾಡುತ್ತಿದೆಯೆಂದು.ನಮ್ಮ ತಪ್ಪುಗಳನ್ನು ಒಪ್ಪಿಕೊಂಡು ದೇವರಿಗೆ ಅರಿಕೆ ಮಾಡಿ/ ನಮ್ಮ ಮಾತು ಮತ್ತು ಸಂಭಾಷಣೆ ಬೇರೆಯವರನ್ನು ಉತ್ತೇಜನ ಗೊಳಿಸುವಂತೆ ದೇವರಿಂದ ಜ್ಞಾನವನ್ನು ದಯಪಾಲಿಸುವಂತೆ ಪವಿತ್ರಾತ್ಮನನ್ನು ಬೇಡಿಕೊಳ್ಳಿರಿ.ಇನ್ನೊಬ್ಬರಿಗೆನೋಯಿಸಿದರೆನಾವು ಪವಿತ್ರಾತ್ಮನನ್ನು ನೊಂದಿಸಿದಂತೆ/ನಮ್ಮ ನಡೆ ಮತ್ತು ನಮ್ಮ ಜೀವನದಿಂದ ಪವಿತ್ರಾತ್ಮನನ್ನು ದುಖಿಸದಂತೆ ನಡೆದುಕೊಳ್ಳುವಾ

ಅನುವಾದ: ಸಿಂಡ್ರೇಲಾ ಜೇಕಬ್

---

ದಿನ 29 **:** ಆತ್ಮದ ಖಡ್ಗ/ಕತ್ತಿ

---

ಎಫೆಸದವರಿಗೆ 6:16-17

16 ಎಲ್ಲಾದಕ್ಕಿಂತ ಹೆಚ್ಚಾಗಿ ನಂಬಿಕೆ ಯೆಂಬ ಗುರಾಣಿಯನ್ನು ಹಿಡುಕೊಳ್ಳಿರಿ. ಆದರಿಂದ ನೀವು ಕೆಡುಕನ ಅಗ್ನಿಬಾಣಗಳನ್ನೆಲ್ಲಾ ಆರಿಸುವದಕ್ಕೆ ಶಕ್ತರಾಗುವಿರಿ. 17 ಇದಲ್ಲದೆ ರಕ್ಷಣೆಯೆಂಬ ಶಿರಸ್ತ್ರಾಣ ವನ್ನು ಇಟ್ಟುಕೊಂಡು ಆತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ.

ದೇವರು ನಮ್ಮನ್ನುಆತ್ಮಿಕ ಸೈನಿಕರಾಗಲು ಬಯಸುತ್ತಾರೆ.ದೇವರಾ ಪೂರ್ಣ ಕವಚವನ್ನು ಧರಿಸಿ ಸೈತಾನನ ಯೋಜನೆಯನ್ನು ಆತನು ಬಯಸುತ್ತಾನೆ. ಸೈನಿಕನ ಪ್ರಮುಖ ಶಾಸ್ತ್ರವು ಕತ್ತಿ/ ಕಲ್ಪಿಸಿಕೊಳ್ಳುವಾ ಕತ್ತಿಯನಿಲ್ಲಿದೆ ಯುದ್ಧಕ್ಕೆ ಹೋಗುವಾ ಸೈನಿಕನು/ಹಾಗೆಯೇ ನಾವು ದೇವರ ವಾಕ್ಯವನ್ನು ದಿನಾಲೂ ಧ್ಯಾನ ಮಾಡುವುದಾ ಹಾಗೇ ಇರುವಲ್ಲಿ ಅನೇಕರು ದೇವರನ್ನು ಬಿಟ್ಟು ಕೊಟ್ಟಿದ್ದಾರೆ ಕಾರಣ ದೇವರ ವಾಕ್ಯವನ್ನು ದಿನಾಲೂ ಧ್ಯಾನಿಸಿದೆ ಇರುವುದರಿಂದ/ ನಿಮ್ಮ ಸತ್ಯವೇದ ಅಧ್ಯಯನ ಹೇಗಿದೆ?

<u>ಅನ್ವಯ</u>

ದೇವರ ವಾಕ್ಯವನ್ನುಪ್ರತಿದಿನ ಧ್ಯಾನಿಸಲು ಗುರಿಯನ್ನಿಟ್ಟುಕೊಳ್ಳುವಾ ಮತ್ತು ಸಮಯವನ್ನು ತೆಗೆದುಕೊಂಡು ನೀವು ಕಲಿತ ವಿಷಯಗಳು ಬೇರೆಯವರಿಗೆ ಹಂಚಿಕೊಳ್ಳಿ.ದೇವ ವಾಕ್ಯದ ಮುಖಾಂತರ ಕಲಿತ ವಿಷಯಗಳನ್ನು ಪಟ್ಟಿ ಮಾಡಿಕೊಂಡು ಅಭ್ಯಸಿಸುವಂತೆ/ಪ್ರಾರ್ಥನಾ ಪೂರ್ವಕವಾಗಿ ಕಲಿತ ಅಂಶಗಳನ್ನು ನಂಬಿಗಸ್ತಕೆಯಿಂದ ಪಾಲನೆಮಾಡಿ. ದೇವರ ವಾಕ್ಯವನ್ನು ಕಂಠಪಾಠ ಮಾಡಲು ಅಭ್ಯಾಸಿಸಿ ಯಾಕೆಂದರೆ ಅದು ನಮಗೆ ನಂಬಿಕೆಯನ್ನು ಹೆಚ್ಚಿಸಲು ಹಾಗೂ ಸೈತಾನನೊಂದಿಗೆ ಹೋರಾಡಲು ಸಹಾಯಕವಾಗುತ್ತದೆ. (ಒಂದು ವಚನ ಪ್ರತಿದಿನ ಅಥವಾ ಪ್ರತಿ ವಾರ)

ಅನುವಾದ: ಸಿಂಡ್ರೇಲಾ ಜೇಕಬ್

---

ದಿನ 30 **:** ದೇವರ ವರವನ್ನು ಪ್ರಜ್ವಲಿಸುವಂತೆ ಮಾಡುವುದು

---

<u>2 ತಿಮೊಥೆಯನಿಗೆ1:6-7</u>

6 ಆದಕಾರಣ ನಾನು ನಿನಗೆ ಹಸ್ತಾರ್ಪಣ ಮಾಡುವದರ ಮೂಲಕ ನಿನಗೆ ದೊರಕಿದ ದೇವರ ವರವು ಪ್ರಜ್ವಲಿಸುವಂತೆ ಮಾಡಬೇಕೆಂದು ನಿನಗೆ ಜ್ಞಾಪಕ ಮಾಡುತ್ತೇನೆ. 7 ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಸ್ವಸ್ಥಬುದ್ಧಿಯ ಆತ್ಮವೇ ಹೊರತು ಭಯದ ಆತ್ಮವಲ್ಲ.

ಪ್ರೀತಿ ಮತ್ತು ಆತ್ಮ ದಂಡನೆ/ದೇವರು ನೀಡಿದ ಪವಿತ್ರಾತ್ಮನಾ ಶಕ್ತಿ. ಪ್ರಶ್ನಿಸಿಕೊಳ್ಳಿ ನಿಮ್ಮ ಜೀವನದಲ್ಲಿ ಧೈರ್ಯ ಶಕ್ತಿ ಪ್ರೀತಿ ಮತ್ತುಸ್ವಯಂ ಸ್ಥಿತ ಈ ಎಲ್ಲವೂ ಅಡಕವಾಗಿದೇಯ ಎಂದು/ ದೇವರು ನಮ್ಮಿಂದ ಬಯಸುವುದೇನೆಂದರೆ ಆತನು ನೀಡಿದವರನ್ನು ಜ್ವಾಲೆಯಂತೆ ಪ್ರಜ್ವಲಿಸಬೇಕೆಂದು/ ದೇವರು ನೀಡಿದ ವರವನ್ನು ಜ್ವಾಲೆಯಂತೆ ಪ್ರಜ್ವಲಿಸಿಬೇಕೆಂದು ನಾವು ಯಾವ ಪ್ರಯತ್ನಗಳನ್ನು ಮಾಡುತ್ತಿದ್ದೇವೆ?

ಅದೆಷ್ಟು ಉತ್ತಮ ದೇವರು ನಮಗೆ ಹೇಗೆ ಹೇಳಿದರೆ-ನಂಬಿಗಸ್ತನಾದ ಒಳ್ಳೇ ಸೇವಕನೇ, ಒಳ್ಳೇ ದನ್ನು ಮಾಡಿದ್ದೀ; ಸ್ವಲ್ಪವಾದವುಗಳಲ್ಲಿ ನೀನು ನಂಬಿಗ ಸ್ತನಾದದ್ದರಿಂದ ನಾನು ನಿನ್ನನ್ನು ಬಹಳವಾದವುಗಳ ಮೇಲೆ ಅಧಿಕಾರಿಯನ್ನಾಗಿ ನೇಮಿಸುವೆನು; ನೀನು ನಿನ್ನ ಯಜಮಾನನ ಸಂತೋಷದಲ್ಲಿ ಪ್ರವೇಶಿಸು ಅಂದನು.

<u>ಅನ್ವಯ</u>

ಬಡವನಿಗೆ ನಿನ್ನ ಪ್ರೀತಿಯನ್ನು ತೋರಿಸು ಅಥವಾ ಕೊಡು

ಅನುವಾದ: ಸಿಂಡ್ರೇಲಾ ಜೇಕಬ್

---

ದಿನ 31 **:** ಪವಿತ್ರಾತ್ಮನಿಂದ ಪ್ರಾರ್ಥಿಸಿರಿ.

---

ಯೂದನು 1:18-19

18 ಭಕ್ತಿಗೆ ವಿರುದ್ಧವಾದ ತಮ್ಮ ಆಶೆಗಳನ್ನು ಅನುಸರಿಸಿ ನಡೆಯುವ ಕುಚೋದ್ಯಗಾರರು ಅಂತ್ಯಕಾಲದಲ್ಲಿ ಇರುವರೆಂದು ಅವರು ನಿಮಗೆ ಹೇಳಿದರು.
19 ಇವರು ತಮ್ಮನ್ನು ತಾವು ಪ್ರತ್ಯೇಕಿಸಿಕೊಳ್ಳುವವರೂ ಪ್ರಾಕೃತಮನುಷ್ಯರೂ ಆತ್ಮವಿಲ್ಲದವರೂ ಆಗಿದ್ದಾರೆ.

ನಮ್ಮನ್ನು ನಾವು ಅತ್ಯಂತ ಪವಿತ್ರ ನಂಬಿಕೆಯ ಮೇಲೆ ಕಟ್ಟಿಕೊಳ್ಳುವುದಕ್ಕೆ ಉತ್ತಮವಾಗಿ ಮಾಡುತ್ತಿದ್ದೇವೆ?ಇಲ್ಲವೇ ಕುಚೋದ್ಯ ಗಾರರು ಭಕ್ತಿಹೀನಾ ಆಸೆಗಳಿಂದ ಪರಿಚಯಿಸಿದ ವಿಷಯಗಳ ಮೇಲೆ ನಾವು ವ್ಯಾಕುಲರಾಗಿದೇವಾ?

ಇನ್ನು ಕೆಲವರು ಅವರ ಸ್ವಭಾವದಿಂದ ಬೇರೆಯವರ ಮೇಲೆ ಪ್ರಭಾವ ಬೀರುತ್ತಾರೆ

ಎಫೆಸದವರಿಗೆ6:18 18 ನೀವು ಆತ್ಮ ಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲವಿಧ ವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ಪ್ರಾರ್ಥಿಸಿರಿ. ಇದರಲ್ಲಿ ಪೂರ್ಣ ಸ್ಥಿರಚಿತ್ತರಾಗಿದ್ದು ಪರಿಶುದ್ಧರೆಲ್ಲರ ವಿಷಯದಲ್ಲಿ ವಿಜ್ಞಾಪನೆಮಾಡುತ್ತಾ ಎಚ್ಚರವಾಗಿರ್ರಿ.

ಅನ್ವಯ

ನಿಮ್ಮ ಕುಟುಂಬ ಗುಂಪಿನಲ್ಲಿ ಪ್ರತಿಯೊಬ್ಬ ಶಿಷ್ಯರಾ ಹೆಸರುಗಳಿಂದ ಪ್ರಾರ್ಥಿಸಿರಿ.ಆತನಲ್ಲಿ ನಂಬಿಗಸ್ತಕೆಯಿಂದ ನಡೆಯಲು ಮತ್ತು ಆತನ ಧ್ವನಿ ಸ್ಪಷ್ಟವಾಗಿ ಕೇಳಲು ದೇವರಲ್ಲಿ ಜ್ಞಾನವನ್ನು ಬೇಡಿಕೊಳ್ಳುವಾ

ಅನುವಾದ: ಸಿಂಡ್ರೇಲಾ ಜೇಕಬ್